ANANTHKUMAR PRATISHTHANA

# ಅನಂತಪಥ

ಸಂಪುಟ - 6 ಜೂನ್ - 2026 ಸಂಚಿಕೆ - 72

ಪುಟ 2
ಸಂಪಾದಕೀಯ
ಪರಿಸರ, ಜವಾಬ್ದಾರಿ ಮತ್ತು ನಮ್ಮ ಭವಿಷ್ಯ
-ತೇಜಸ್ವಿನಿ ಅನಂತಕುಮಾರ್



## ಅನಂತ ನಾಯಕತ್ವ : ಸಾರ್ವಜನಿಕ ಬದುಕಿಗೆ ಆದರ್ಶ ಗುಣಗಳು



ಸಮಾಜದಲ್ಲಿ ಧನಾತ್ಮಕ ಬದಲಾವಣೆಯನ್ನು ತರಬಲ್ಲ ಅತ್ಯಂತ ದೊಡ್ಡ ಶಕ್ತಿ ಯುವಜನತೆಯಲ್ಲಿದೆ ಎಂಬುದನ್ನು ದೃಢವಾಗಿ ನಂಬಿದ್ದವರು ಶ್ರೀ ಅನಂತಕುಮಾರ್. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೂಲಕ ಸಾರ್ವಜನಿಕ ಜೀವನಕ್ಕೆ ಹೆಜ್ಜೆಯಿಟ್ಟ ಅವರು, ಅಂದು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮೂಡಿಸಿದ ಹೆಜ್ಜೆಗುರುತುಗಳು ಇಂದಿನ ತಲೆಮಾರಿನ ಯುವ ನಾಯಕರಿಗೆ ಅತ್ಯುತ್ತಮ ದಾರಿದೀಪಗಳಂತಿವೆ. ೮೦ರ ದಶಕದಲ್ಲಿ ವ್ಯಾಪಕವಾಗಿ ನಡೆದ ವಿದ್ಯಾರ್ಥಿ ಹೋರಾಟಗಳಲ್ಲಿ ಸಾವಿರಾರು ಯುವಕರನ್ನು ಸಂಘಟಿಸಿ, ರಾಜ್ಯದ ಮೂಲೆ ಮೂಲೆಗಳಿಗೆ ಓಡಾಡಿ ಕಾರ್ಯಕರ್ತರನ್ನು ಒಗ್ಗೂಡಿಸಿ ತಾವೇ ಮುಂಚೂಣಿಯಲ್ಲಿ ನಿಂತು ಹೋರಾಡಿದ ನಾಯಕ ಅವರು. ಅವರ ಜೀವನ ಮತ್ತು ಕಾರ್ಯವೈಖರಿ ಇಂದಿನ ಯುವಪೀಳಿಗೆಗೆ ನಾಯಕತ್ವದ ನೈಜ ಪಾಠಶಾಲೆಯಾಗಿದೆ.

**ಕ್ಯಾಪಿಟೇಷನ್ ಹಾವಳಿ ವಿರುದ್ಧ ಸಮರ ಮತ್ತು ಶೈಕ್ಷಣಿಕ ಹಿತಾಸಕ್ತಿ:** ೧೯೮೦ರ ದಶಕದಲ್ಲಿ ರಾಜ್ಯದಲ್ಲಿ ಸ್ಥಾಪಿತವಾದ ಅನೇಕ ಖಾಸಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ವಿಧಿಸುತ್ತಿದ್ದ ಭಾರಿ ಕ್ಯಾಪಿಟೇಷನ್ ಶುಲ್ಕದ ಹಾವಳಿ ಪ್ರತಿಭಾವಂತ, ಬಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಆಕಾಂಕ್ಷೆಗಳಿಗೆ ತಣ್ಣೀರೆರಚಿತ್ತು. ಇದನ್ನು ಬಲವಾಗಿ ವಿರೋಧಿಸಿ ೧೯೮೩ರಲ್ಲಿ “ಕ್ಯಾಪಿಟೇಷನ್ ಹಾವಳಿ - ಗಂಟು ಮೂಟೆ ಕಟ್ಟಲಿ” ಎಂಬ ಶಕ್ತಿಯುತ ಘೋಷಣೆಯೊಂದಿಗೆ ಅನಂತಕುಮಾರ್ ಅವರು ರಾಜ್ಯಮಟ್ಟದ ಬೃಹತ್ ಹೋರಾಟವನ್ನು ಪ್ರಾರಂಭಿಸಿದರು. ರಾಜ್ಯಾದ್ಯಂತ ನಡೆದ ಈ ಬೃಹತ್ ಹೋರಾಟದ ಅಂಗವಾಗಿ ಧರಣಿಗಳ ಮೂಲಕ ತೀವ್ರ ಪ್ರತಿಭಟನೆಗಳು ನಡೆದವು.

ಅನಂತಕುಮಾರ್ ಅವರ ಹೋರಾಟಗಳಿಗೆ ವಿದ್ಯಾರ್ಥಿಗಳ ಹಿತಾಸಕ್ತಿಯೊಂದೇ ಏಕೈಕ ಲಕ್ಷ್ಯವಾಗಿತ್ತು ಎಂಬುದಕ್ಕೆ ವಾರ್ಷಿಕ ಪರೀಕ್ಷೆಗಳ ವಿಷಯದಲ್ಲಿ ಅವರು ತೆಗೆದುಕೊಂಡ ನಿಲುವು ಒಂದು ಉತ್ತಮ ಉದಾಹರಣೆ. ಆ ಕಾಲದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ರಾಜಧಾನಿಯ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ವಾರ್ಷಿಕ ಪರೀಕ್ಷೆಗಳು ನಿಯಮಿತ ಕಾಲಕ್ಕೆ ಸರಿಯಾಗಿ ನಡೆಯುತ್ತಿರಲಿಲ್ಲ. ಪರೀಕ್ಷೆಗೆ ಯಾವುದೇ ತಯಾರಿ ಮಾಡಿಕೊಳ್ಳದ ಒಂದು ವರ್ಗದ ವಿದ್ಯಾರ್ಥಿಗಳು ಪರೀಕ್ಷೆ ಬೇಡ ಎಂದು ಗಲಾಟೆ ಮಾಡಿ ಮುಂದೂಡಿಸುತ್ತಿದ್ದರು, ಇದಕ್ಕೆ ಪೋಕರಿ ಹುಡುಗರು ಮತ್ತು ವಿದ್ಯಾರ್ಥಿ ಸಂಘಗಳ ಮುಖಂಡರು ಸಾಥ್ ನೀಡುತ್ತಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಅನಂತಕುಮಾರ್ ಅವರು, ಆಯಾ ವಿಶ್ವವಿದ್ಯಾಲಯಗಳಿಗೆ ಸೇರಿದ ಸ್ಥಳೀಯ ವಿದ್ಯಾರ್ಥಿಗಳನ್ನು ಸಂಘಟಿಸಿ, ಕಾಲಕಾಲಕ್ಕೆ ಸರಿಯಾಗಿ ಪರೀಕ್ಷೆ ನಡೆಸುವುದು ವಿದ್ಯಾರ್ಥಿ ಸಮುದಾಯದ ಹಕ್ಕು ಎಂದು ಅವರಿಗೆ ಅರಿವು ಮೂಡಿಸುತ್ತಿದ್ದರು. ವಿದ್ಯಾರ್ಥಿಗಳನ್ನು, ಅಧಿಕಾರಿಗಳ ಹತ್ತಿರ ಕರೆದುಕೊಂಡು ಹೋಗಿ ನಿಮ್ಮ ಹಕ್ಕೊತ್ತಾಯಗಳನ್ನು ಗಟ್ಟಿದನಿಯಲ್ಲಿ ಕೇಳಿ ಎಂದು ಅವರನ್ನು ಹುರಿದುಂಬಿಸುತ್ತಿದ್ದರು. ಇದರ ಫಲವಾಗಿ ಪರೀಕ್ಷೆಗಳು ಸುಸೂತ್ರವಾಗಿ ನಡೆದು ವಿದ್ಯಾರ್ಥಿ ಸಮುದಾಯ ಮತ್ತು ವಿಶ್ವವಿದ್ಯಾಲಯದ ಜವಾಬ್ದಾರಿಯೂ ಹೆಚ್ಚುವಂತಾಯಿತು.

ಅನಂತಕುಮಾರ್ ಅವರ ನಾಯಕತ್ವದ ಮತ್ತೊಂದು ಪ್ರಮುಖ ಆಯಾಮ ಸಾಮಾಜಿಕ ಜಾಗೃತಿ. ಮಹಿಳೆಯರ ಮೇಲಿನ ಕಿರುಕುಳ, ಅಶ್ಲೀಲತೆ ಮತ್ತು ಸಮಾಜದ ಅನಾರೋಗ್ಯಕರ ಪ್ರವೃತ್ತಿಗಳ ವಿರುದ್ಧ ಅವರು ನಿರಂತರ ಧ್ವನಿ ಎತ್ತಿದರು. ವಿಶೇಷವಾಗಿ ವಿದ್ಯಾರ್ಥಿನಿಯರನ್ನು ಸಾಮಾಜಿಕ ವಿಷಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ಯುವಜನತೆ ಮೌನವಾಗಿರಬಾರದು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅವರ ಪ್ರೇರಣೆಯಿಂದ ಅನೇಕ ವಿದ್ಯಾರ್ಥಿನಿಯರು ಸಾರ್ವಜನಿಕ ಜೀವನದಲ್ಲಿ ಆತ್ಮವಿಶ್ವಾಸದಿಂದ ಪಾಲ್ಗೊಳ್ಳಲು ಆರಂಭಿಸಿದರು.

**ಸ್ವಗೃಹವೇ ಕಾರ್ಯಾಲಯ:** ಸಂಘಟನೆಯನ್ನು ಕಟ್ಟುವುದು ಎಂದರೆ ಕೇವಲ ಕಚೇರಿಗಳನ್ನು ತೆರೆಯುವುದಲ್ಲ, ಬದಲಿಗೆ ಜನರ ಹೃದಯಗಳನ್ನು ಗೆಲ್ಲುವುದು ಎಂಬುದನ್ನು ಅನಂತಕುಮಾರ್ ತೋರಿಸಿಕೊಟ್ಟಿದ್ದರು. ಆ ದಿನಗಳಲ್ಲಿ ಪರಿಷತ್ತಿನ ಅನೇಕ ಊರುಗಳಲ್ಲಿ ಸ್ವಂತ ಕಾರ್ಯಾಲಯಗಳಿರಲಿಲ್ಲ, ಆಗ ಕಾರ್ಯಕರ್ತರು ತಮ್ಮ ಸ್ವಂತ ಮನೆಗಳ ಮೂಲಕ ಕಾರ್ಯಾಲಯಗಳನ್ನು ನಡೆಸುತ್ತಿದ್ದರು.

ಪುಟ 6 ರಲ್ಲಿ ಮುಂದುವರಿದಿದೆ

# ಪರಿಸರ, ಜವಾಬ್ದಾರಿ ಮತ್ತು ನಮ್ಮ ಭವಿಷ್ಯ

ಕಳೆದ ಸುಮಾರು ಆರು ವರ್ಷಗಳಿಂದ ಅನಂತಕುಮಾರ್ ಪ್ರತಿಷ್ಠಾನವು ಪ್ರತಿ ತಿಂಗಳ 22ರಂದು ಅನಂತ ಪಥವನ್ನು ಪ್ರಕಟಿಸುತ್ತಾ ಬಂದಿದೆ. ಶ್ರೀ ಅನಂತಕುಮಾರ್ ಅವರ ವ್ಯಕ್ತಿತ್ವ, ರಾಷ್ಟ್ರಸೇವೆ, ಸಮಾಜಮುಖಿ ಚಿಂತನೆ ಹಾಗೂ ಪರಿಸರದ ಬಗ್ಗೆ ಅವರು ಹೊಂದಿದ್ದ ಅಪಾರ ಕಾಳಜಿಯಿಂದ ಪ್ರೇರಣೆ ಪಡೆಯುವಲ್ಲಿ ಈ ಪ್ರಕಟಣೆ ತನ್ನದೇ ಆದ ಒಂದು ಸಣ್ಣ ಕೊಡುಗೆಯನ್ನು ನೀಡಿದೆ ಎಂಬ ತೃಪ್ತಿ ನನಗಿದೆ. ಈ ಪಯಣದಲ್ಲಿ ನಾವು ಕೇವಲ ಇಂದಿನ ಸವಾಲುಗಳ ಬಗ್ಗೆ ಮಾತ್ರವಲ್ಲ, ಮುಂದಿನ ತಲೆಮಾರುಗಳ ಬಗ್ಗೆ ನಮ್ಮ ಜವಾಬ್ದಾರಿಯ ಕುರಿತೂ ಚಿಂತಿಸಬೇಕಾದ ಅಗತ್ಯವಿದೆ.

ಇಂದು ಜಗತ್ತು ಅನಿಶ್ಚಿತತೆಯ ಒಂದು ಹಂತವನ್ನು ಎದುರಿಸುತ್ತಿದೆ. ಮಧ್ಯಪ್ರಾಚ್ಯದಲ್ಲಿ ಇರಾನ್, ಅಮೆರಿಕ ಹಾಗೂ ಇತರ ರಾಷ್ಟ್ರಗಳ ನಡುವೆ ಉಂಟಾದ ಉದ್ವಿಗ್ನತೆ ಮತ್ತು ಸಂಘರ್ಷವು ವಿಶ್ವದ ಪರಸ್ಪರ ಅವಲಂಬನೆಯ ವಾಸ್ತವಿಕತೆಯನ್ನು ಮತ್ತೊಮ್ಮೆ ನೆನಪಿಸಿದೆ. ಯುದ್ಧವು ಕೊನೆಗೊಳ್ಳುವ ಸೂಚನೆಗಳು ಕಂಡುಬರುತ್ತಿದ್ದರೂ, ಅದರ ಪರಿಣಾಮಗಳ ಬಗ್ಗೆ ಅನಿಶ್ಚಿತತೆ ಇನ್ನೂ ಮುಂದುವರಿದಿದೆ. ಈ ಬೆಳವಣಿಗೆಗಳು ಮಧ್ಯಪ್ರಾಚ್ಯವನ್ನು ಮಾತ್ರವಲ್ಲದೆ ಇಂಧನ ಪೂರೈಕೆ, ತೈಲ ಬೆಲೆ, ಸಾರಿಗೆ ವೆಚ್ಚ ಮತ್ತು ಆರ್ಥಿಕ ಸ್ಥಿರತೆಯ ಮೇಲೆ ಪರಿಣಾಮ ಬೀರಿದ್ದು, ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ಅದರ ಪರಿಣಾಮವನ್ನು ಅನುಭವಿಸುತ್ತಿವೆ. ಇಂತಹ ಸಂದರ್ಭಗಳು ಸುಸ್ಥಿರ ಹಾಗೂ ಪರ್ಯಾಯ ಇಂಧನ ಮೂಲಗಳ ಅಗತ್ಯತೆಯನ್ನು ಮತ್ತೊಮ್ಮೆ ಜಗತ್ತಿನ ಮುಂದಿಟ್ಟಿವೆ.

ಈ ವಿಷಯದಲ್ಲಿ ಅದಮ್ಯ ಚೇತನ ಬಹಳ ಹಿಂದೆಯೇ ದೂರದೃಷ್ಟಿಯ ಹೆಜ್ಜೆ ಇಟ್ಟಿದೆ. 2009ರಿಂದಲೇ ಸಂಸ್ಥೆಯು ಸ್ವದೇಶಿ, ಪರಿಸರ ಸ್ನೇಹಿ ಹಾಗೂ ಸುಸ್ಥಿರ ಇಂಧನ ವ್ಯವಸ್ಥೆಗಳ ಅನುಷ್ಠಾನಕ್ಕೆ ಒತ್ತು ನೀಡುತ್ತಿದೆ. ಕರ್ನಾಟಕದ ವಿವಿಧ ಅಡುಗೆಮನೆಗಳಲ್ಲಿ ಸಾಂಪ್ರದಾಯಿಕ ಇಂಧನಗಳ ಬದಲಿಗೆ ಕೃಷಿ ತ್ಯಾಜ್ಯದಿಂದ ತಯಾರಿಸಲಾದ ಬ್ರಿಕೆಟ್‌ಗಳು, ಆಹಾರ ತ್ಯಾಜ್ಯದಿಂದ ಉತ್ಪಾದಿಸಲಾದ ಬಯೋಗ್ಯಾಸ್, ತೆಂಗಿನ ಚಿಪ್ಪಿನ ಆಧಾರಿತ ಹೊಗೆರಹಿತ ಒಲೆಗಳು ಹಾಗೂ ಸೌರಶಕ್ತಿಯ ಬಳಕೆಯನ್ನು ಅಳವಡಿಸಿಕೊಂಡಿದೆ. ಇಂದು ಜಗತ್ತು ಇಂಧನದ ಬೆಲೆ ಏರಿಕೆ ಮತ್ತು ಪೂರೈಕೆ ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ, ಈ ಪ್ರಯತ್ನಗಳ ಮಹತ್ವ ಇನ್ನಷ್ಟು ಸ್ಪಷ್ಟವಾಗುತ್ತಿದೆ.

ಮಧ್ಯಪ್ರಾಚ್ಯದ ಯುದ್ಧಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆ ಮನುಕುಲದ ಮುಂದಿರುವ ಅತ್ಯಂತ ದೊಡ್ಡ ಸವಾಲುಗಳಾಗಿವೆ. ಪ್ರಕೃತಿಯ ಸಂಪನ್ಮೂಲಗಳ ಮೇಲೆ ಮನುಷ್ಯ ನಡೆಸಿದ ಅತಿಯಾದ ಒತ್ತಡ ಮತ್ತು ಶೋಷಣೆಯೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಸಮಸ್ಯೆಯ ಪರಿಹಾರಗಳು ನಮಗೆ ತಿಳಿದಿದ್ದರೂ, ಅವುಗಳನ್ನು ಅಗತ್ಯವಾದ ಗಂಭೀರತೆ ಮತ್ತು ತುರ್ತಿನೊಂದಿಗೆ ಅನುಷ್ಠಾನಗೊಳಿಸಲು ವಿಫಲವಾಗಿರುವುದು ನಮ್ಮ ದೊಡ್ಡ ದೌರ್ಬಲ್ಯವಾಗಿದೆ.

ಅತಿವೃಷ್ಟಿ, ಅನಾವೃಷ್ಟಿ, ವಾಯುಮಾಲಿನ್ಯ, ಜಲಮಾಲಿನ್ಯ ಹಾಗೂ ಮಣ್ಣು ಮತ್ತು ನೀರಿನಲ್ಲಿ ಹೆಚ್ಚುತ್ತಿರುವ ಮೈಕ್ರೋಪ್ಲಾಸ್ಟಿಕ್ ಸಮಸ್ಯೆಗಳು ಮಾನವ ಜೀವನಕ್ಕೆ ಗಂಭೀರ ಅಪಾಯಗಳಾಗಿವೆ. ಒಂದು ಕಾಲದಲ್ಲಿ ಶುದ್ಧ ಕುಡಿಯುವ ನೀರಿನ ಬಗ್ಗೆ ನಾವು ಚಿಂತಿಸುತ್ತಿದ್ದೆವು. ಇಂದು ಶುದ್ಧ ಗಾಳಿಯೇ ಅಪರೂಪವಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದಿನ ದಿನಗಳಲ್ಲಿ ಆಮ್ಲಜನಕವನ್ನೂ ಖರೀದಿಸಿ ಬಳಸಬೇಕಾದ ಪರಿಸ್ಥಿತಿ ಎದುರಾಗಬಹುದೇ ಎಂಬ ಆತಂಕವೂ ಮೂಡುತ್ತಿದೆ.

ಜಗತ್ತಿನ ಅತ್ಯಂತ ವಾಯುಮಾಲಿನ್ಯಯುಕ್ತ ನಗರಗಳಲ್ಲಿ ಬಹುಪಾಲು ನಗರಗಳು ಭಾರತದಲ್ಲಿರುವುದು ಆತಂಕಕಾರಿ ಸಂಗತಿಯಾಗಿದೆ. ವ್ಯಕ್ತಿಗತವಾಗಿ ಪಾಶ್ಚಾತ್ಯ ದೇಶಗಳಿಗಿಂತ ಕಡಿಮೆ ತ್ಯಾಜ್ಯ ಉತ್ಪಾದಿಸುತ್ತಿದ್ದರೂ, ಒಟ್ಟಾರೆ ಜನಸಂಖ್ಯೆಯ ಕಾರಣದಿಂದಾಗಿ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ.

ಸಂತೋಷದ ಸಂಗತಿಯೆಂದರೆ, ಅದಮ್ಯ ಚೇತನದಂತಹ ಸಂಸ್ಥೆಗಳು ಹಾಗೂ ಅನೇಕ ಜಾಗೃತ ನಾಗರಿಕರು ಪರಿಸರ ಸಂರಕ್ಷಣೆಯ ದಿಕ್ಕಿನಲ್ಲಿ ಅರ್ಥಪೂರ್ಣ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಮನೆಯಲ್ಲಿಯೇ ಸಾವಯವ ಗೊಬ್ಬರ ತಯಾರಿಸುವುದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಬಟ್ಟೆಯ ಚೀಲಗಳನ್ನು ಬಳಸುವುದು, ತ್ಯಾಜ್ಯವನ್ನು ವಿಂಗಡಿಸಿ ಮರುಬಳಕೆಗೆ ಕಳುಹಿಸುವುದು, ಇ-ತ್ಯಾಜ್ಯ ಹಾಗೂ ವೈದ್ಯಕೀಯ ತ್ಯಾಜ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸುವಂತಹ ಕಾರ್ಯಗಳು ಕ್ರಮೇಣ ಜನಪ್ರಿಯವಾಗುತ್ತಿವೆ. ಆದಾಗ್ಯೂ, ಈ ಪದ್ಧತಿಗಳು ಸಮಾಜದ ಎಲ್ಲ ವರ್ಗಗಳ ದೈನಂದಿನ ಬದುಕಿನ ಭಾಗವಾಗಿವೆಯೇ ಎಂಬ ಪ್ರಶ್ನೆಗೆ ಇನ್ನೂ ಸ್ಪಷ್ಟವಾದ ಉತ್ತರ ದೊರಕಿಲ್ಲ.



## ಸಂಪಾದಕೀಯ

ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುತ್ತಿರುವ ಈ ಜೂನ್ ತಿಂಗಳಲ್ಲಿ ನಾವು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ವೈಯಕ್ತಿಕವಾಗಿ ನಾವು ಏನು ಮಾಡಬಹುದು? ಕುಟುಂಬವಾಗಿ, ಶಾಲೆ-ಕಾಲೇಜುಗಳಲ್ಲಿ, ಕಾರ್ಯಕ್ಷೇತ್ರಗಳಲ್ಲಿ ಹಾಗೂ ಸಮಾಜದ ಮಟ್ಟದಲ್ಲಿ ಪರಿಸರ ಸಂರಕ್ಷಣೆಗೆ ಹೇಗೆ ಕೈಜೋಡಿಸಬಹುದು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಚಿಂತನೆಯಷ್ಟೇ ಅಲ್ಲ, ಆ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದು ಇತರರಿಗೂ ಪ್ರೇರಣೆ ನೀಡುವುದು ಅಗತ್ಯವಾಗಿದೆ.

ಭಾರತವು ಇಂದು ಹಲವಾರು ಕ್ಷೇತ್ರಗಳಲ್ಲಿ ಹೊಸ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ. ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶವು ಅಭಿವೃದ್ಧಿಯ ಹೊಸ ದಿಕ್ಕುಗಳತ್ತ ಸಾಗುತ್ತಿದೆ. ಇತ್ತೀಚಿನ ರಾಜಕೀಯ ಬೆಳವಣಿಗೆಗಳು ಮತ್ತು ವಿವಿಧ ರಾಜ್ಯಗಳ ಚುನಾವಣಾ ಫಲಿತಾಂಶಗಳು ಹೊಸ ಚರ್ಚೆಗಳಿಗೆ ಕಾರಣವಾಗಿವೆ. ರಾಷ್ಟ್ರೀಯ ಭದ್ರತೆ, ಅಭಿವೃದ್ಧಿ, ಆರ್ಥಿಕ ಪ್ರಗತಿ ಹಾಗೂ ಸುಶಾಸನದಂತಹ ವಿಷಯಗಳು ಸಾರ್ವಜನಿಕ ಚರ್ಚೆಯ ಕೇಂದ್ರಬಿಂದುವಾಗಿವೆ. ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪೇ ಅಂತಿಮ ಎಂಬುದನ್ನು ನಾವು ಸದಾ ಗೌರವಿಸಬೇಕು.

ಬೆಂಗಳೂರು ಇಂದು ವೇಗವಾಗಿ ನಡೆಯುತ್ತಿರುವ ನಗರೀಕರಣ, ಜನಸಂದಣಿ, ಸಂಚಾರ ದಟ್ಟಣೆ, ವಾಯುಮಾಲಿನ್ಯ ಹಾಗೂ ಕುಗ್ಗುತ್ತಿರುವ ಹಸಿರು ಪ್ರದೇಶಗಳಂತಹ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಈ ಹಿನ್ನೆಲೆ ನಗರದಲ್ಲಿ ಹಸಿರು ವಲಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷಿ ಯೋಜನೆಗಳು ಆರಂಭವಾಗಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಬಿಡಿಎ ಆಯುಕ್ತರಾದ ಶ್ರೀ ಮಣಿವಣ್ಣನ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಪ್ರಯತ್ನ ಪ್ರಶಂಸನೀಯವಾಗಿದೆ. ಅದಮ್ಯ ಚೇತನವೂ ಈ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ.

ಇಂದು ಯಾವ ಪಕ್ಷ ಅಧಿಕಾರದಲ್ಲಿದೆ ಅಥವಾ ಯಾರು ಮುಖ್ಯಮಂತ್ರಿಯಾಗಿದ್ದಾರೆ ಎಂಬುದಕ್ಕಿಂತಲೂ ಮುಖ್ಯವಾದುದು ಬೆಂಗಳೂರಿನ ಹಸಿರು ಭವಿಷ್ಯ. ಗಿಡಗಳನ್ನು ನೆಡುವುದು ಮೊದಲ ಹೆಜ್ಜೆ ಮಾತ್ರ. ಅವುಗಳನ್ನು ಉಳಿಸಿ ಬೆಳೆಸುವುದು ಅದಕ್ಕಿಂತಲೂ ದೊಡ್ಡ ಜವಾಬ್ದಾರಿ. ಇದೇ ದೃಷ್ಟಿಯಿಂದ ದಾನಿಗಳು, ಸ್ವಯಂಸೇವಕರು ಮತ್ತು ನಾಗರಿಕರ ಸಹಕಾರದೊಂದಿಗೆ 25,000 ಗಿಡಗಳನ್ನು ನೆಟ್ಟು, ಅವುಗಳನ್ನು ಪೋಷಿಸಿ ಬೆಳೆಸುವ ಹೊಣೆಯನ್ನು ಅದಮ್ಯ ಚೇತನ ಹೊತ್ತಿದೆ. ಇದು ಕೇವಲ ವೃಕ್ಷಾರೋಪಣೆಯ ಕಾರ್ಯಕ್ರಮವಲ್ಲ; ಪರಿಸರ ಪುನರುಜ್ಜೀವನ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ದೀರ್ಘಕಾಲೀನ ಸಂಕಲ್ಪವಾಗಿದೆ.

ಪರಿಸರ ಸಂರಕ್ಷಣೆ ಸರ್ಕಾರಗಳ ಕೆಲಸ ಮಾತ್ರವಲ್ಲ; ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಇಂದು ನಾವು ತೆಗೆದುಕೊಳ್ಳುವ ಸಣ್ಣ ಸಣ್ಣ ನಿರ್ಧಾರಗಳೇ ನಾಳಿನ ಭಾರತದ ಭವಿಷ್ಯವನ್ನು ರೂಪಿಸಲಿವೆ. ಆದ್ದರಿಂದ ಪರಿಸರದ ಬಗ್ಗೆ ಕಾಳಜಿ, ಸಮಾಜದ ಬಗ್ಗೆ ಜವಾಬ್ದಾರಿ ಹಾಗೂ ರಾಷ್ಟ್ರದ ಬಗ್ಗೆ ಬದ್ಧತೆ ಎಂಬ ಮೂರು ಮೌಲ್ಯಗಳನ್ನು ನಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸೋಣ.



- ತೇಜಸ್ವಿನಿ ಅನಂತಕುಮಾರ್

ಅನಂತಯಾನ

# ವಿರೋಧ ಮೆಟ್ಟಿದ ಒಂಟಿದನಿ

1981. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಡಾ. ಬಿ.ಎಂ. ನಂಜುಂಡಪ್ಪನವರು ಕುಲಪತಿಯಾಗಿ ನೇಮಕಗೊಂಡು ಬಂದಿದ್ದರು. ಆ ಸಮಯದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾ ವ್ಯವಸ್ಥೆ ಹದಗೆಟ್ಟಿತ್ತು. ಮಾರ್ಚ್ ತಿಂಗಳಲ್ಲಿ ನಡೆಯಬೇಕಾದ ಪದವಿ ಪರೀಕ್ಷೆಗಳು ಒಂದಿಲ್ಲೊಂದು ಕಾರಣಕ್ಕೆ ಮುಂದೂಡಲ್ಪಟ್ಟು ಜೂನ್ ತಿಂಗಳಲ್ಲೋ ಜುಲೈ ತಿಂಗಳಲ್ಲೋ ನಡೆಯುತ್ತಿದ್ದವು. ಕಳೆದ ವರುಷ ಓದಿದ ವಿಷಯಕ್ಕೆ ಈ ವರ್ಷದ ಆಗಸ್ಟ್ ತಿಂಗಳಲ್ಲಿ ಪರೀಕ್ಷೆ ನಡೆದರೂ ಅಚ್ಚರಿಯಿಲ್ಲ. ಪರೀಕ್ಷಾ ದಿನಾಂಕ ಘೋಷಣೆಯಾದಾಗಲೆಲ್ಲ ಚಳುವಳಿ ಹೂಡಿ ಪರೀಕ್ಷೆಗಳನ್ನು ಮುಂದೂಡುವಂತೆ ವಿದ್ಯಾರ್ಥಿಗಳು ಒತ್ತಾಯಿಸುವುದೂ, ಅಧಿಕಾರಿಗಳು ಕೂಡಲೇ ಪರೀಕ್ಷೆಗಳನ್ನು ಮುಂದೂಡುವುದೂ ವಾರ್ಷಿಕ ಶೈಕ್ಷಣಿಕ ಚಟುವಟಿಕೆಗಳ ಒಂದು ಅನಿವಾರ್ಯ ಭಾಗವಾಗಿರುತ್ತಿತ್ತು.


ಹೊಸ ಕುಲಪತಿಗಳು ಅಧಿಕಾರ ವಹಿಸಿಕೊಂಡು ಒಂದು ಸಂದರ್ಶನದ ವೇಳೆ ಹೇಳಿಕೆ ಕೊಟ್ಟರು. " ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ ಶಿಸ್ತನ್ನು ಜಾರಿಗೆ ತರುವುದು ನನ್ನ ಆದ್ಯತೆ. ಈ ಶೈಕ್ಷಣಿಕ ವರ್ಷಕ್ಕೆ ನಾನು ವೇಳಾಪಟ್ಟಿ ಸಿದ್ಧಪಡಿಸಿ ಕೊಡುತ್ತೇನೆ. ಅದರಂತೆಯೇ ತರಗತಿಗಳು, ಪರೀಕ್ಷೆಗಳು ಎಲ್ಲವೂ ನಡೆಯತಕ್ಕದ್ದು, ನಡೆದೇ ನಡೆಯುತ್ತವೆ" ಎಂದರು. ಪರೀಕ್ಷಾ ದಿನಾಂಕಗಳನ್ನೂ ಅಂದೇ ಪ್ರಕಟಿಸಿದ್ದರು. ಇನ್ನೂ ಈಗ ತಾನೇ ತರಗತಿಗಳು ಪ್ರಾರಂಭವಾಗುವ ಹಂತದಲ್ಲಿವೆ. ಆಗಲೇ ಪರೀಕ್ಷೆಯ ದಿನವನ್ನು ಘೋಷಿಸುತ್ತಿದ್ದಾರೆ, ಪಾಪ, ಹೊಸದಾಗಿ ಬಂದವರಲ್ಲವೇ, ಹೀಗೆಲ್ಲ ಘೋಷಣೆ ಮಾಡುವುದು ಇದ್ದೇ ಇರುತ್ತದೆ, ಏನು ಬೇಕಾದರೂ ಹೇಳಿಕೊಳ್ಳಲಿ ಎಂದು ಎಲ್ಲರೂ ಸುಮ್ಮನಿದ್ದರು.

ಸಾಮಾನ್ಯವಾಗಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಪದ್ಧತಿ ಗೊಂದಲಗಳ ಆಗರವಾಗಿರುತ್ತಿತ್ತು. ಸಮಯಕ್ಕೆ ಸರಿಯಾಗಿ ಪಾಠಪ್ರವಚನಗಳಾಗುತ್ತಿರಲಿಲ್ಲ, ನಿಗದಿತ ಕಾಲಕ್ಕೆ ಪರೀಕ್ಷೆಗಳು ನಡೆಯುತ್ತಿರಲಿಲ್ಲ. ಇದನ್ನು ತಪ್ಪಿಸಿ ಸುವ್ಯವಸ್ಥೆಯನ್ನು ಕಲ್ಪಿಸಲು ಎಲ್ಲ ವಿಶ್ವವಿದ್ಯಾನಿಲಯಗಳ ಕುಲಪತಿಗಳೂ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಎಂದು ಆ ವರ್ಷ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯಕಾರಿಣಿಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಲಾಗಿತ್ತು. ನಿರ್ಣಯದ ಪ್ರತಿಗಳನ್ನು ಆಯಾ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೂ ಕಳುಹಿಸಿಕೊಡಲಾಗಿತ್ತು. ಆ ಸಂದರ್ಭದಲ್ಲಿ ಅಚ್ಯುತ ಲಿಮಯೆ ಪರಿಷತ್ತಿನ ರಾಜ್ಯ ಕಾರ್ಯದರ್ಶಿಗಳಾಗಿದ್ದರು. ಅವರನ್ನೂ ಅನಂತಕುಮಾರರನ್ನೂ ಸಂಪರ್ಕಿಸಿದ ಉಪಕುಲಪತಿ ನಂಜುಂಡಪ್ಪನವರು ತಾವು ಈಗಾಗಲೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಸ್ತನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳುತ್ತಿರುವುದಾಗಿಯೂ ತಮ್ಮ ಕ್ರಮಗಳನ್ನು ವಿದ್ಯಾರ್ಥಿ ಪರಿಷತ್ತು ಬೆಂಬಲಿಸಬೇಕೆಂದೂ ಕೇಳಿದ್ದರು.

ಈ ಮುನ್ನವೇ ಅನಂತಕುಮಾರರಿಗೆ ಉಪಕುಲಪತಿಗಳ ಪರಿಚಯವಾಗಿತ್ತು. ಹಾಗೆ ಪರಿಚಯವಾದ ಸಂದರ್ಭವೂ ವಿಶೇಷವಾಗಿತ್ತು. ಪದವಿ ವಿದ್ಯಾರ್ಥಿಯಾಗಿದ್ದ ಕಾಲಕ್ಕೆ ಅನಂತಕುಮಾರ್ ಸ್ಕೂಟರ್ ಓಡಿಸುವುದನ್ನು ಅಭ್ಯಾಸ ಮಾಡತೊಡಗಿದ್ದರು. ಅವರಿಗೆ ಸ್ಕೂಟರ್ ಹೇಳಿಕೊಡುತ್ತಿದ್ದವರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ.

ಹೀಗೆ ಕಲಿಕೆಯ ಅವಧಿಯಲ್ಲೊಮ್ಮೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅನಂತಕುಮಾರ್ ಸ್ಕೂಟರ್ ಓಡಿಸುತ್ತಿದ್ದಾರೆ. ಅವರ ಹಿಂದೆ ಕುಳಿತ 'ತರಬೇತುದಾರ' ಕಾಗೇರಿಯವರು ಸೂಚನೆ ಕೊಡುತ್ತಿದ್ದಾರೆ. ಇಳಿಜಾರು ರಸ್ತೆಯಲ್ಲಿ ಸ್ಕೂಟರ್ ವೇಗವಾಗಿ ಓಡತೊಡಗಿತು. ಬ್ರೇಕು ಇತ್ಯಾದಿಗಳು ಇರಲೇ ಇಲ್ಲವೇನೋ ಎಂಬಂತೆ ವರ್ತಿಸತೊಡಗಿತು. ವೇಗವನ್ನು ನಿಯಂತ್ರಿಸಲು ಏನು ಮಾಡುವುದೆಂದು ತಿಳಿಯದ ಅನಂತಕುಮಾರರ ಚಡಪಡಿಕೆ ಒಂದು ಕಡೆ. ಹಿಂಬದಿ ಸವಾರ ಕಾಗೇರಿಯವರು ವಾಹನವನ್ನು ನಿಯಂತ್ರಿಸುವುದು ಹೇಗೆಂಬ ತಿಳುವಳಿಕೆ ಕೊಡುವ ಮುನ್ನವೇ ಇಳಿಜಾರಿನ ಕೊನೆಯಲ್ಲಿದ್ದ ಮನೆಯ ಗೇಟಿಗೆ ಸ್ಕೂಟರ್ ಧಡಾರನೆ ಗುದ್ದಿ ತಾನೇ ನಿಂತುಕೊಂಡಿತು.

ಆ ಮನೆಯೇ ಕುಲಪತಿ ನಂಜುಂಡಪ್ಪನವರ ನಿವಾಸವಾಗಿತ್ತು. ತಮ್ಮ ಸ್ಕೂಟರಿನ ಅಪರಾಧವನ್ನು ಮನ್ನಿಸಬೇಕೆಂದು ಕೇಳುವುದಕ್ಕಾಗಿಯಾದರೂ ಅನಂತಕುಮಾರ ಹೊಸ ಕುಲಪತಿಗಳನ್ನು ಭೇಟಿ ಮಾಡಬೇಕಾಯಿತು. ಅವರೊಬ್ಬ ವಿದ್ಯಾರ್ಥಿ ನಾಯಕನೆಂದು ಕುಲಪತಿಗಳಿಗೂ ತಿಳಿದಂತಾಯಿತು.




ಶೈಕ್ಷಣಿಕ ಸುಧಾರಣೆಗೆ ಕುಲಪತಿಗಳು ತೆಗೆದುಕೊಳ್ಳುವ ಕ್ರಮವನ್ನು ವಿದ್ಯಾರ್ಥಿ ಪರಿಷತ್ತು ಬೆಂಬಲಿಸುವುದೆಂದು ಪರಿಷತ್ತಿನ ಪರವಾಗಿ ಅಚ್ಯುತ ಲಿಮಯೆ ಮತ್ತು ಅನಂತಕುಮಾರ ಹೇಳಿಕೆ ಕೊಟ್ಟರು. ಪರೀಕ್ಷೆಗಳನ್ನು ಸಕಾಲದಲ್ಲಿ ನಡೆಸಲು ತಮ್ಮ ಬೆಂಬಲವಿದೆಯೆಂದು ಪರಿಷತ್ತು ಭರವಸೆ ಕೊಟ್ಟಿದ್ದು ನಂಜುಂಡಪ್ಪನವರಿಗೆ ಸಂತೋಷವುಂಟುಮಾಡಿತು. ಪರೀಕ್ಷೆಗಳು ಹತ್ತಿರ ಬರುವವರೆಗೆ ಎಲ್ಲವೂ ಸರಿಯಾಗಿಯೇ ಇದ್ದವು.

ಪರೀಕ್ಷಾದಿನಗಳು ಸಮೀಪಿಸುತ್ತಿರುವಂತೆಯೇ ಯಥಾಪ್ರಕಾರ ಚಳುವಳಿಯ ಕೂಗು ಕೇಳಿಬರತೊಡಗಿತು. ಹುಬ್ಬಳ್ಳಿಯ ವಿದ್ಯಾನಗರದ ಒಂದು ರಸ್ತೆಯಲ್ಲಿ ಈ ಕೊನೆಯಿಂದ ಆ ಕೊನೆಯ ತನಕ ಕಾಲೇಜುಗಳೇ. ಆರ್ಟ್ಸ್, ಕಾಮರ್ಸ್, ಸೈನ್ಸ್, ಇಂಜಿನಿಯರಿಂಗ್, ಮೆಡಿಕಲ್ ..ಹೀಗೆ ಎಲ್ಲ ಉನ್ನತಶಿಕ್ಷಣ ಸಂಸ್ಥೆಗಳು ಇಲ್ಲಿಯೇ ಒಟ್ಟಾಗಿವೆ. ಒಂದು ಕಾಲೇಜಿನಲ್ಲಿ ಶುರುವಾದ ಚಳುವಳಿಯ ಗಾಳಿ ಇನ್ನೊಂದನ್ನು ತಲುಪಲು ಎಷ್ಟು ಹೊತ್ತು ಬೇಕು?

ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆಗಳನ್ನು ಮುಂದೂಡುವ ತಮ್ಮ ಬೇಡಿಕೆಯನ್ನು ಮುಂದಿಟ್ಟು ಚಳುವಳಿ ಪ್ರಾರಂಭಿಸಿದರು. ಆಗ ಅವರಿಗೆ ಪರೀಕ್ಷೆಗಳನ್ನು ನಡೆಸಲು ವಿದ್ಯಾರ್ಥಿ ಪರಿಷತ್ತಿನ ಪರವಾಗಿ ಬೆಂಬಲ ಕೊಟ್ಟಿರುವ ವಿಷಯವನ್ನು ನೆನಪಿಸಲಾಯಿತು. ಈಗ ಹುಡುಗರ ಕೋಪ ಇತ್ತ ಕಡೆಗೆ ತಿರುಗಿತು. "ಎಲ್ಲಿದ್ದಾನೆ ಅಚ್ಯುತ ಲಿಮಯೆ? ಕರೀರಿ ಅವನನ್ನ. ಪರೀಕ್ಷೆಗೆ ಅಂವ ಕೂಡ್ತಾನಾ? ಇಲ್ಲ, ಪರೀಕ್ಷೆಗೆ ಕೂಡಾಂವರು ನಾವು. ಅಂವ ಹ್ಯಾಂಗ ಹೇಳಿಕೆ ಕೊಟ್ಟ? " ಎಂದು ಕೂಗಾಡತೊಡಗಿದರು.

ಅಂದು ಅಚ್ಯುತ ಲಿಮಯೆ ಹುಬ್ಬಳ್ಳಿಯಲ್ಲಿ ಇರಲೇ ಇಲ್ಲ. ಪೂರ್ಣಾವಧಿ ಕಾರ್ಯಕರ್ತ ಎಂದಮೇಲೆ ಒಂದು ಕಡೆ ಇರುವಂತಿಲ್ಲ. ಅಚ್ಯುತನ ಮನೆ ಹುಬ್ಬಳ್ಳಿಯಲ್ಲೇ ಇದ್ದಿತು; ಆದ್ದರಿಂದ ಅವರು ಅಲ್ಲಂತೂ ಹೆಚ್ಚು ದಿನ ಇರುವಂತೆಯೇ ಇರಲಿಲ್ಲ.

ಹೀಗಾಗಿ ವಿದ್ಯಾರ್ಥಿಗಳ ಕೋಪ ಅನಂತಕುಮಾರರ ಕಡೆಗೆ ಕೇಂದ್ರೀಕೃತವಾಯಿತು. ಪತ್ರಿಕಾ ಹೇಳಿಕೆ ಕೊಟ್ಟಿದ್ದು ಅನಂತಕುಮಾರನೇ ತಾನೇ ! " ಅದೇನು ಡಿಸಿಪ್ಲಿನ್ ತರಬೇಕೆಂದಿದ್ದೀಯ, ನಾವೂ ನೋಡತೀವಿ " ಎಂದು ಅನಂತಕುಮಾರನ ಸುತ್ತ ಘೇರಾಯಿಸಿದರು. ಐದುನೂರರಿಂದ ಆರುನೂರರವರೆಗೆ ತನ್ನ ಸುತ್ತ ಸೇರಿ ಘೋಷಣೆಗಳನ್ನು ಕೂಗುತ್ತಿದ್ದ ವಿದ್ಯಾರ್ಥಿಗಳನ್ನು ಎದುರಿಸಿ ಅನಂತಕುಮಾರ್ ಒಬ್ಬರೇ ನಿಂತಿದ್ದರು! ಇಷ್ಟರಲ್ಲಿ ಕೆಲವರು ಅನಂತಕುಮಾರನ ಮೇಲೆ ಕೈಮಾಡಲೂ ಸಿದ್ಧರಾಗಿದ್ದರು. ಅನಂತಕುಮಾರ್ ಧೈರ್ಯಗೆಡದೆ ಗುಂಪನ್ನು ಎದುರಿಸಿ ನಿಂತರು. ಪರೀಕ್ಷೆಗಳನ್ನು ಸಕಾಲದಲ್ಲಿ ನಡೆಸುವ ಸಲುವಾಗಿ ವಿಶ್ವವಿದ್ಯಾಲಯದ ಕ್ರಮವನ್ನು ಬೆಂಬಲಿಸಿ ಹೇಳಿಕೆ ಕೊಟ್ಟಿರುವುದು ನಿಜವೆಂದು ಹೇಳಿದರು.

ಪುಟ 4 ರಲ್ಲಿ ಮುಂದುವರಿದಿದೆ

# ತಿರುವಾಂಕೂರಿನ ಶಿಲ್ಪಿ ಮಾರ್ತಾಂಡ ವರ್ಮ

ಭಾರತೀಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ನಮಗೆ ಸಾಮ್ರಾಟ್ ಅಶೋಕ, ಚಂದ್ರಗುಪ್ತ ಮೌರ್ಯ ಅಥವಾ ಛತ್ರಪತಿ ಶಿವಾಜಿ ಮಹಾರಾಜರಂತಹ ಪ್ರಸಿದ್ಧ ಆಡಳಿತಗಾರರ ವೀರಗಾಥೆಗಳು ಹೆಚ್ಚಾಗಿ ಮುನ್ನೆಲೆಗೆ ಬರುತ್ತವೆ. ಆದರೆ ದಕ್ಷಿಣ ಭಾರತದ ತುತ್ತ ತುದಿಯಲ್ಲಿ ಕುಳಿತು, ಜಾಗತಿಕ ಮಟ್ಟದ ಅತ್ಯಂತ ಶಕ್ತಿಶಾಲಿ ಯೂರೋಪಿಯನ್ ನೌಕಾಪಡೆಯನ್ನೇ ಯುದ್ಧರಂಗದಲ್ಲಿ ಧೂಳೀಪಟ ಮಾಡಿದ ಅಪ್ರತಿಮ ವೀರನೊಬ್ಬನ ಚರಿತ್ರೆ ಇಂದಿಗೂ ಇತಿಹಾಸದ ಮುಖ್ಯವಾಹಿನಿಯಲ್ಲಿ ಹೆಚ್ಚು ಚರ್ಚೆಯಾಗಿಲ್ಲ. ಅವರೇ ಆಧುನಿಕ ತಿರುವಾಂಕೂರು ಸಾಮ್ರಾಜ್ಯದ ಶಿಲ್ಪಿ ಎನಿಸಿಕೊಂಡ ಮಹಾರಾಜ ಅನಿಳಂ ತಿರುನಾಳ್ ಮಾರ್ತಾಂಡ ವರ್ಮ. ಇಂದಿನ ಕೇರಳದ ದಕ್ಷಿಣ ಭಾಗವನ್ನು ಒಳಗೊಂಡಿದ್ದ ಈ ಸಾಮ್ರಾಜ್ಯವನ್ನು 18ನೇ ಶತಮಾನದಲ್ಲಿ ಇವರು ಅತ್ಯಂತ ದಕ್ಷತೆಯಿಂದ ಮುನ್ನಡೆಸಿದರು.

ಹದಿನೆಂಟನೇ ಶತಮಾನದ ಆರಂಭದಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿಯು ಜಾಗತಿಕ ಸಾಂಬಾರ ಪದಾರ್ಥಗಳ ಮಾರುಕಟ್ಟೆಯಲ್ಲಿ ಸಂಪೂರ್ಣ ಏಕಸ್ವಾಮ್ಯ ಹೊಂದಿತ್ತು. ಕೇರಳದ ಮಲಬಾರ್ ತೀರದ ಕಾಳುಮೆಣಸು ಮತ್ತು ದಾಲ್ಚಿನ್ನಿ ವ್ಯಾಪಾರವನ್ನು ತನ್ನ ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಡಚ್ ಪಡೆಗಳು ಮುಂದಾದಾಗ, ಅವುಗಳ ಎದುರು ಮಾರ್ತಾಂಡ ವರ್ಮ ಅವರು ಬಂಡೆಯಂತೆ ನಿಂತರು. ಇದರ ಪರಿಣಾಮವಾಗಿ 1741ರಲ್ಲಿ ನಡೆದ ಐತಿಹಾಸಿಕ 'ಕೊಳಚೆಲ್ ಕದನ' ಏಷ್ಯಾ ಮತ್ತು ಜಾಗತಿಕ ಇತಿಹಾಸದಲ್ಲೇ ಒಂದು ಅಭೂತಪೂರ್ವ ಮೈಲಿಗಲ್ಲಾಗಿ ದಾಖಲಾಯಿತು. ಅತ್ಯಾಧುನಿಕ ಯುದ್ಧನೌಕೆಗಳು ಮತ್ತು ಫಿರಂಗಿಗಳನ್ನು ಹೊಂದಿದ್ದ ಡಚ್ ಸೈನ್ಯವನ್ನು, ಮಾರ್ತಾಂಡ ವರ್ಮ ಅವರು ತಮ್ಮ ಸಾಂಪ್ರದಾಯಿಕ ನಾಯರ್ ಪಡೆ ಹಾಗೂ ಸ್ಥಳೀಯ ಮೀನುಗಾರ ಸಮುದಾಯದ ನೆರವಿನೊಂದಿಗೆ ಚಾಣಾಕ್ಷ ರಣತಂತ್ರ ರೂಪಿಸಿ ಸಂಪೂರ್ಣವಾಗಿ ಸೋಲಿಸಿದರು. ಏಷ್ಯಾದ ರಾಜನೊಬ್ಬ ಯೂರೋಪಿಯನ್ ನೌಕಾಪಡೆಯನ್ನು ಯುದ್ಧದಲ್ಲಿ ಸಂಪೂರ್ಣವಾಗಿ ಧ್ವಂಸಗೊಳಿಸಿದ ಮೊದಲ ಮತ್ತು ಏಕೈಕ ಉದಾಹರಣೆ ಇದಾಗಿದೆ. ಈ ಭೀಕರ ಸೋಲಿನ ನಂತರ ಡಚ್ ಪಡೆಗಳು ಭಾರತದಲ್ಲಿ ಮತ್ತೆಂದೂ ತಲೆ ಎತ್ತಲಾಗಲಿಲ್ಲ.



ಕೇವಲ ಯುದ್ಧರಂಗದಲ್ಲಿ ಮಾತ್ರವಲ್ಲದೆ, ಆಡಳಿತ ರಂಗದಲ್ಲೂ ಮಾರ್ತಾಂಡ ವರ್ಮ ಅವರದ್ದು ಅದ್ಭುತ ದೂರದೃಷ್ಟಿಯಾಗಿತ್ತು. ಅಧಿಕಾರಕ್ಕೆ ಬಂದ ತಕ್ಷಣ ಅವರು ಸಾಮ್ರಾಜ್ಯಕ್ಕೆ ಸವಾಲಾಗಿದ್ದ ಸ್ಥಳೀಯ ಸಾಮಂತ ರಾಜರು ಹಾಗೂ 'ಎಟ್ಟು ವೀಟ್ಟಿಲ್ ಪಿಲ್ಲಮಾರ್' ಎಂಬ ಎಂಟು ಪ್ರಭಾವಿ ಜಮೀನ್ದಾರಿ ಕುಟುಂಬಗಳ ಆಂತರಿಕ ಶತ್ರುಗಳ ಕೂಟವನ್ನು ಮಟ್ಟಹಾಕಿದರು. ತದನಂತರ ಇಡೀ ಸಾಮ್ರಾಜ್ಯದಲ್ಲಿ ಬಲಿಷ್ಠ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದರು. ಕೃಷಿ ರಂಗಕ್ಕೆ ಹೆಚ್ಚಿನ ಆದ್ಯತೆ ನೀಡಿದ ಅವರು, ಕೃಷಿ ಭೂಮಿಯನ್ನು ವೈಜ್ಞಾನಿಕವಾಗಿ ಮರು-ಸರ್ವೆ ಮಾಡಿಸಿ, ನೀರಾವರಿ ಕಾಲುವೆಗಳನ್ನು ನಿರ್ಮಿಸುವ ಮೂಲಕ ರೈತರಿಗೆ ಗಣನೀಯ ನೆರವು ನೀಡಿದರು. ಇದರೊಂದಿಗೆ ಕಾಳುಮೆಣಸು ಸೇರಿದಂತೆ ಪ್ರಮುಖ ಸಾಂಬಾರ ಪದಾರ್ಥಗಳ ವ್ಯಾಪಾರವನ್ನು ಸಂಪೂರ್ಣವಾಗಿ ಸರ್ಕಾರದ ಸುಪರ್ದಿಗೆ ತಂದು ಸರ್ಕಾರಿ ಸ್ವಾಮ್ಯವನ್ನು ಸ್ಥಾಪಿಸಿದರು. ಈ ಕ್ರಮದಿಂದಾಗಿ ವಿದೇಶಿ ಶಕ್ತಿಗಳು ಸ್ಥಳೀಯರನ್ನು ಶೋಷಿಸುವುದು ತಪ್ಪಿತು ಮತ್ತು ತಿರುವಾಂಕೂರಿನ ಆರ್ಥಿಕತೆಯು ಸಾರ್ವಕಾಲಿಕ ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತು.

ಇಂದು ಜಾಗತಿಕರಣತಂತ್ರ ಮತ್ತು ದೇಶೀಯ ರಕ್ಷಣಾ ನೀತಿಗಳ ಬಗ್ಗೆ ಮಾತನಾಡುವಾಗ ಮಾರ್ತಾಂಡ ವರ್ಮ ಅವರ ಕೊಡುಗೆಗಳನ್ನು ಸ್ಮರಿಸುವುದು ಅತ್ಯಗತ್ಯ. ವಿದೇಶಿ ಆಕ್ರಮಣಕಾರರ ವಾಣಿಜ್ಯ ಆಸೆಗಳನ್ನು ಆರಂಭದಲ್ಲೇ ಗುರುತಿಸಿ, ಸ್ವದೇಶಿ ಬಲದಿಂದ ಅವರನ್ನು ಹಿಮ್ಮೆಟ್ಟಿಸಿದ ಮಾರ್ತಾಂಡ ವರ್ಮ ಅವರ ಇತಿಹಾಸವನ್ನು ಇಂದಿನ ಪೀಳಿಗೆಗೆ ತಲುಪಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಇತಿಹಾಸದ ಪುಟಗಳಲ್ಲಿ ಕಮರಿಹೋದ ಇಂತಹ ಧೀರ ನಾಯಕರ ಕಥೆಗಳು ಕನ್ನಡಿಗರು ಸೇರಿದಂತೆ ಇಡೀ ಭಾರತೀಯ ಯುವಜನತೆಗೆ ಸದಾ ಪ್ರೇರಣಾದಾಯಿಯಾಗಿದೆ.

ಪುಟ 3 ರಿಂದ

# ವಿರೋಧ ಮೆಟ್ಟಿದ ಒಂಟಿ ಧ್ವನಿ

ಮತ್ತೆ ಗಲಾಟೆ ಶುರುವಾಯಿತು. "ಅದು ಹೆಂಗೆ ನೀ ಹೇಳಿಕೆ ಕೊಟ್ಟೀ? ಯಾರನ್ನ ಕೇಳಿ ಕೊಟ್ಟುಬಂದೀ? " ಎಂದು ಕೂಗತೊಡಗಿದ ಕೆಲವರು ಅನಂತಕುಮಾರರನ್ನು ತಳ್ಳಾಡತೊಡಗಿದರು. ಪರೀಕ್ಷಾವ್ಯವಸ್ಥೆ ಸುಲಲಿತವಾಗಿ ನಿಗದಿತ ವೇಳೆಯಲ್ಲಿ ನಡೆಯುವುದೇ ಸರಿ ಎನ್ನುವ ಅನಂತಕುಮಾರರ ನಿಲುವನ್ನು ಕೇಳಲು ಯಾರೂ ಸಿದ್ಧರಿರಲಿಲ್ಲ. " ನಮ್ಮನ್ನ ಕೇಳದೆ ನೀನು ಹೆಂಗ ಒಪ್ಪಿಕೊಂಡು ಬಂದೀ? ಮೊದಲು ಸ್ಟೇಟ್ ಮೆಂಟ್ ವಾಪಸ್ ತಗೋ" ಎಂದು ಏರುದನಿಯಲ್ಲಿ ಪ್ರಶ್ನಿಸತೊಡಗಿದರು.

"ನೋಡರೀ ಇದು ರಾಜ್ಯ ಕಾರ್ಯಕಾರಣಿಯ ನಿರ್ಧಾರ, ನನ್ನದಲ್ಲ. ನೀವು ಹೇಳೋ ಹಂಗ ಸ್ಟೇಟ್ ಮೆಂಟ್ ವಾಪಸ್ ತೆಗೀಲಿಕ್ಕೆ ಬರೋದಿಲ್ಲ " ಎಂದ ಅನಂತಕುಮಾರರ ಮಾತನ್ನು ಯಾರೂ ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಈ ವಾದವಿವಾದಗಳ ನಡುವೆ ಅನಂತಕುಮಾರ್ ತನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಬೇಕೆಂದು ವಿದ್ಯಾರ್ಥಿಗಳನ್ನು ಕೇಳಿಕೊಂಡರು. " ನನಗ ಹತ್ತು ನಿಮಿಷ ಮಾತಾಡಲಿಕ್ಕ ಅವಕಾಶ ಕೊಡ್ರೀ. ನನ್ನ ಮಾತು ಕೇಳರಿ. ಆಮೇಲೆ ನಿಮಗ ಸರಿಕಂಡಹಾಂಗ ಮಾಡೋರಂತ "ಎಂದರು. ಎಲ್ಲ ವಿದ್ಯಾರ್ಥಿಗಳೂ ಒಪ್ಪಿ ಅನಂತಕುಮಾರರ ಮಾತು ಕೇಳಲು ಸಿದ್ಧರಾದರು.

ಪ್ರತಿ ವರ್ಷ ಹೀಗೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆಗಳ ವೇಳಾಪಟ್ಟಿ ವ್ಯತ್ಯಾಸವಾಗುತ್ತಲೇ ಬಂದಿದೆ. ಇದರ ಅನನುಕೂಲ, ತೊಂದರೆಗಳನ್ನು ಯಾರೂ ಗಮನಿಸುತ್ತಲೇ ಇಲ್ಲ. ವಿದ್ಯಾರ್ಥಿ ನಾಯಕರು ಹೀಗೆ ಪರೀಕ್ಷೆ ಮುಂದೂಡುವುದನ್ನೇ ಒಂದು ಸಂಪ್ರದಾಯ ಮಾಡಿಕೊಂಡು ಬಂದಿದ್ದಾರೆ. ಈ ಕೆಟ್ಟ ರೂಢಿಯನ್ನು ನಾವು ಮುರಿಯಬೇಕಾಗಿದೆ" ಎಂದು ಅನಂತಕುಮಾರ್ ಮಾತಿಗಾರಂಭಿಸಿದರು.

ಹುಬ್ಬಳ್ಳಿ ಧಾರವಾಡದಲ್ಲಿ ನಾವು ವಿದ್ಯಾರ್ಥಿಗಳು ಅನುಸರಿಸುತ್ತಿರುವ ಈ ಕೆಟ್ಟ ಪದ್ಧತಿಯಿಂದ ಉಳಿದ ಕಡೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ಪರಿಣಮಿಸುತ್ತಾ ಇದೆ. ಇಲ್ಲಿ ಪರೀಕ್ಷೆ ಮುಂದೆ ಹಾಕಿಸಿ ನಮ್ಮ ಹುಡುಗರು ಪರೀಕ್ಷೆ ಬರೆಯುವುದೇ ಜುಲೈ ಆಗಸ್ಟ್ ತಿಂಗಳ ಹೊತ್ತಿಗೆ. ಫಲಿತಾಂಶ ಬರುವುದು ಸೆಪ್ಟೆಂಬರಿಗೋ ಅಕ್ಟೋಬರಿಗೋ. ಇಲ್ಲಿ ನಮ್ಮ ಹುಡುಗರ ಡಿಗ್ರಿ ಫಲಿತಾಂಶ ಬರುವ ಹೊತ್ತಿಗೆ ನಮ್ಮ ರಾಜ್ಯದ ಉಳಿದ ಎಲ್ಲ ಕಡೆ ವಿದ್ಯಾರ್ಥಿಗಳ ರಿಸಲ್ಟ್ ಬಂದು, ಎಲ್ಲರೂ ಕೆಲಸ ಹುಡುಕಿಕೊಂಡು ನೆಲೆ ಕಂಡಿರುತ್ತಾರೆ. ನಮ್ಮ ಹುಡುಗರು ಬರೇ ಪರೀಕ್ಷೆ ಮುಂದಕ್ಕೆ ಹಾಕುವ ಹುರುಪಿನಲ್ಲಿ ಇಡೀ ಒಂದೋ ಎರಡೋ ವರ್ಷದ ಭವಿಷ್ಯ ಕಳಕೊಂಡಿರ್ತಾರೆ. ಇವರಿಗಿಂತ ಜೂನಿಯರ್ ಹುಡುಗರ ಜೊತೆ ಇವರು ಮುಂದಿನ ವರ್ಷ ಉದ್ಯೋಗ ಮಾಡಲಿಕ್ಕೆ ಸ್ಪರ್ಧಾ ಮಾಡಬೇಕು. ಯೋಚನೆ ಮಾಡ್ರೀ. ಇದೊಂದು ವರ್ಷ ನಮಗೆ ತೊಂದರೆ ಆದರೂ ಅಡ್ಡಿಯಿಲ್ಲ. ಪರೀಕ್ಷೆ ಮುಂದೂಡಿಕೆಯ ಈ ಕೆಟ್ಟ ಅಭ್ಯಾಸ ಇಲ್ಲಿಗೇ ಬಿಡೋಣ. ನಮ್ಮ ಹುಡುಗರಿಗೆ ಉಳಿದ ಕಡೆಯ ಹುಡುಗರಿಗಿಂತ ಮುಂಚೆ ರಿಸಲ್ಟ್ ಬರೋ ಹಾಗೆ, ಬೇಗ ಕೆಲಸ ಸಿಗೋ ಹಾಗೆ ಪ್ರಯತ್ನ ಮಾಡೋಣ. ಇಲ್ಲ, ಉಳಿದ ಮಕ್ಕಳು ಮುಂದೆ ಹೋಗಲಿ, ನಾವು ಇದ್ದ ಹಾಗೇ ಇರೋಣಂತೆ ಅನ್ನೂದಾದರೆ ಹಾಗೇ ಮಾಡ್ರೀ. ಇದೊಂದು ವರ್ಷ ನೀವೆಲ್ಲ ಸ್ವಲ್ಪ ತ್ಯಾಗ ಮಾಡಲಿಕ್ಕೆ ಸಿದ್ಧ ಅಂದರೆ ನಮ್ಮ ವಿದ್ಯಾರ್ಥಿಗಳಿಗೆ ಇನ್ನೆಂದೂ ಅನ್ಯಾಯ ಆಗೂದಿಲ್ಲ, ಇಷ್ಟೇ ನಾನು ಹೇಳುವಂಥಾದ್ದು. ನೀವು ನೀವೇ ಚರ್ಚಾ ಮಾಡ್ರಿ. ಒಂದು ನಿರ್ಧಾರ ತಗೋಳ್ರಿ" ಎಂದು ಕೈಮುಗಿದು ಸುಮ್ಮನಾದರು.

ಅಲ್ಲಿದ್ದ ನೂರಾರು ವಿದ್ಯಾರ್ಥಿಗಳು ಅನಂತಕುಮಾರರ ಭಾಷಣವನ್ನು ನಿಶ್ಯಬ್ದವಾಗಿ ಆಲಿಸಿದರು. ಮತ್ತೆ ತಮ್ಮತಮ್ಮೊಳಗೇ ಚರ್ಚಿಸತೊಡಗಿದರು. ಅನಂತಕುಮಾರ್ ಹೇಳಿದ ಮಾತುಗಳಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಹಾನಿಯೊದಗುವ ಅಂಶ ಒಂದಿನಿತೂ ಇರಲಿಲ್ಲ. ಇಷ್ಟು ವರ್ಷಗಳ ಕಾಲ ಪರೀಕ್ಷೆ ಮುಂದೂಡುವ ಆಟದಿಂದ ತಮ್ಮ ಭವಿಷ್ಯಕ್ಕೇ ಪೆಟ್ಟುಬೀಳುತ್ತಿತ್ತೆನ್ನುವ ಸತ್ಯ ಅವರಿಗೆ ಇದೀಗ ಗೋಚರವಾಯಿತು. ಪ್ರತಿಭಟನೆ ಅಲ್ಲಿಗೇ ನಿಂತಿತು. ನಂಜುಂಡಪ್ಪನವರ ಪೂರ್ವಯೋಜನೆಯಂತೆ ಪರೀಕ್ಷೆಗಳು ಸಕಾಲದಲ್ಲಿ ನಡೆದವು.

# ನೆನಪಿನ ಅಂಗಳದಲ್ಲಿ ಅನಂತಕುಮಾರ್: ನನ್ನ ಬದುಕಿಗೆ ಧೈರ್ಯ ತುಂಬಿದ ಜನನಾಯಕ

ನಾನು ಕಂಡಂತೆ




ಅನಂತಕುಮಾರ್

ಅದು 1984ರ ಜೂನ್ ತಿಂಗಳು. ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ನಡೆಸುತ್ತಿದ್ದ ಬಾಂಗೂರ ನಗರ ಜ್ಯೂನಿಯರ್ ಮತ್ತು ಡಿಗ್ರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಂದ ಭಾರಿ ದೇಣಿಗೆ (ಡೋನೇಶನ್) ವಸೂಲಿ ಮಾಡಲು ಆರಂಭಿಸಿದ್ದರು. ನಾನಾಗಷ್ಟೇ ಪದವಿ ಮುಗಿಸಿ ಕಾಲೇಜಿನಿಂದ ಹೊರಬಂದಿದ್ದೆ. ದಾಂಡೇಲಿ ನಗರದ ಎ.ಬಿ.ವಿ.ಪಿ. ಪ್ರಮುಖನಾಗಿ ಸಕ್ರಿಯನಾಗಿದ್ದ ಆ ದಿನಗಳಲ್ಲಿ, ಶ್ರೀ ವಿಶ್ವೇಶ್ವರ ಹೆಗಡೆಯವರು ಜಿಲ್ಲಾ ಪ್ರಮುಖರಾಗಿದ್ದರು ಮತ್ತು ಶ್ರೀ ಅನಂತ ಕುಮಾರ್ ಅವರು ಪ್ರಾಂತ ಕಾರ್ಯದರ್ಶಿಯಾಗಿದ್ದರು. ಈ ಅನ್ಯಾಯದ ದೇಣಿಗೆಯ ವಿಷಯ ತಿಳಿಯುತ್ತಿದ್ದಂತೆಯೇ ವಿಶ್ವೇಶ್ವರ ಹೆಗಡೆಯವರು, ಇದನ್ನು ಬಲವಾಗಿ ಪ್ರತಿಭಟಿಸಲು ಆಡಳಿತ ಮಂಡಳಿಗೆ ಪ್ರತಿಭಟನಾ ಪತ್ರ ಕೊಡುವಂತೆ ನನಗೆ ಹೇಳಿದರು. ಆದರೆ, ನಮ್ಮ ಈ ಹೆಜ್ಜೆಯನ್ನು ಕಂಡ ನಗರದ ಅನೇಕ ಹಿರಿಯರು, "ಇದರಿಂದ ಏನೂ ಪ್ರಯೋಜನವಾಗದು, ಪೇಪರ್ ಮಿಲ್ಲಿನವರು ಯಾರಿಗೂ ಬಗ್ಗುವುದಿಲ್ಲ, ಸುಮ್ಮನೆ ನಿಮ್ಮ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ" ಎಂದು ನಿರುತ್ಸಾಹಗೊಳಿಸಲು ಯತ್ನಿಸಿದರು.

ಆದರೆ, ಶ್ರೀ ವಿಶ್ವೇಶ್ವರ ಹೆಗಡೆಯವರು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಧರಣಿ ನಡೆಸಿದರು. ಸತತ ಒಂದು ವಾರದ ಧರಣಿಯ ನಂತರ, ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲು ನಿರ್ಧರಿಸಿದೆವು. ಅಂದು ಎಲ್ಲಾ ಶಾಲೆ-ಕಾಲೇಜುಗಳನ್ನು ಬಂದ್ ಮಾಡಿಸಿ ಮೆರವಣಿಗೆ ಹೊರಟಾಗ ಧೋ ಎಂದು ಮಳೆ ಸುರಿಯಲಾರಂಭಿಸಿತು. ಆದರೂ ಮಳೆಯನ್ನೂ ಲೆಕ್ಕಿಸದೆ ಸುಮಾರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಮೆರವಣಿಗೆ ಯಶಸ್ವಿಯಾಯಿತು. ಅಂದಿನ ಆ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದವರು ಶ್ರೀ ಅನಂತ ಕುಮಾರ್. ಅವರ ಪರಿಚಯ ನನಗಾಗಿದ್ದೇ ಮೊದಲ ಬಾರಿ. ನಮ್ಮ ಹೋರಾಟ ಯಶಸ್ವಿಯಾಗಿ ಆಡಳಿತ ಮಂಡಳಿ ಪಡೆದ ದೇಣಿಗೆಯನ್ನು ಹಿಂತೆಗೆದುಕೊಳ್ಳುವಂತಾಯಿತು. ಅಂದಿನ ದಿನಗಳಲ್ಲಿ ದಾಂಡೇಲಿಯಲ್ಲಿ ಇದೊಂದು ಅತ್ಯಂತ ದೊಡ್ಡ ಸುದ್ದಿಯಾಗಿತ್ತು.

ಆ ಹೋರಾಟದ ನಂತರ, ಸಂಘಟನೆಗಾಗಿ ಶ್ರೀ ಅನಂತ ಕುಮಾರ್ ಅವರು ಪ್ರತಿ 2-3 ತಿಂಗಳಿಗೊಮ್ಮೆ ಬರುತ್ತಿದ್ದರು. ಕಾಲಕ್ರಮೇಣ ವಿಶ್ವೇಶ್ವರ ಹೆಗಡೆಯವರು ರಾಜ್ಯ ಕಾರ್ಯದರ್ಶಿಯಾದರೆ, ನಾನು ಎ.ಬಿ.ವಿ.ಪಿ. ಜಿಲ್ಲಾ ಕಾರ್ಯದರ್ಶಿಯಾದೆ. ಅನಂತ ಕುಮಾರ್ ಅವರು ರಾಷ್ಟ್ರೀಯ ಕಾರ್ಯದರ್ಶಿಯಾದಾಗ ನಮ್ಮ ಜಿಲ್ಲೆಯ ಜವಾಬ್ದಾರಿ ಅವರದ್ದೇ ಆಗಿತ್ತು. ಜಿಲ್ಲಾ ಕಾರ್ಯದರ್ಶಿಯಾಗಿದ್ದ ನನ್ನನ್ನು ಅವರು ತಮ್ಮ ಇಡೀ ಪ್ರವಾಸದುದ್ದಕ್ಕೂ ಜೊತೆಯಲ್ಲೇ ಕರೆದೊಯ್ದರು. ಜಿಲ್ಲೆಯ ಎಲ್ಲ ಭಾಗಗಳ ಮತ್ತು ಗ್ರಾಮಗಳ ಹಿರಿಯರನ್ನು ಪರಿಚಯಿಸಿಕೊಟ್ಟರು. ಅವರ ಜೊತೆ ಕಳೆದ ಆ ನಾಲ್ಕೈದು ದಿನಗಳ ನಿಕಟ ಒಡನಾಟ ನನಗೆ ಕೇವಲ ಜಿಲ್ಲೆಯಷ್ಟೇ ಅಲ್ಲ, ರಾಜ್ಯ, ದೇಶ ಮತ್ತು ಇಡೀ ಜಗತ್ತಿನ ಸಮಕಾಲೀನ ರಾಜಕೀಯದ ಆಳವಾದ ಅರಿವನ್ನು ತಂದುಕೊಟ್ಟಿತು. ಅಪ್ರತಿಮ ಜ್ಞಾನಭಂಡಾರವಾಗಿದ್ದ ಅವರು ರಾಷ್ಟ್ರೀಯ ವಿಷಯಗಳನ್ನು, ವಿವಿಧ ಕ್ಷೇತ್ರಗಳ ಜ್ಞಾನವನ್ನು ತಮ್ಮ ಅನುಭವಗಳ ಮೂಲಕ ನನಗೆ ಹೇಳುತ್ತಿದ್ದರು.

ನಾವು ಹೋದ ಕಡೆಯಲ್ಲೆಲ್ಲಾ ಕಾರ್ಯಕರ್ತರೊಂದಿಗೆ, ಶಿಕ್ಷಕರೊಂದಿಗೆ ಹಾಗೂ ಮನೆ ವಾಸ್ತವ್ಯವಿದ್ದಲ್ಲಿ ಅವರೊಂದಿಗೆ ಅವರು ನಡೆದುಕೊಳ್ಳುತ್ತಿದ್ದ ರೀತಿ ನಿಜಕ್ಕೂ ಅನುಕರಣೀಯವಾಗಿತ್ತು. ಎಲ್ಲಿಗೇ ಹೋದರೂ ಕ್ಷಣಮಾತ್ರದಲ್ಲಿ ಆ ಮನೆಯವರೇ ಆಗಿಬಿಡುತ್ತಿದ್ದರು. ಮನೆಯ ಪ್ರತಿಯೊಬ್ಬರ ಹೆಸರು ಅವರಿಗೆ ನೆನಪಿರುತ್ತಿತ್ತು. ಕಲೆ, ಸಾಹಿತ್ಯ, ರಾಜಕೀಯ, ವಿಜ್ಞಾನ, ದೇಶ-ವಿದೇಶಗಳ ವಿದ್ಯಮಾನಗಳು ಹಾಗೂ ಅಧ್ಯಾತ್ಮ ಸೇರಿದಂತೆ ಸಕಲ ವಿಷಯಗಳಲ್ಲೂ ಅವರಿಗೆ ಅಪಾರ ಪಾಂಡಿತ್ಯವಿತ್ತು. ಒಮ್ಮೆ ನಮ್ಮ ಮನೆಯಲ್ಲಿ ತಂಗಿದ್ದಾಗ, ಹಸ್ತ ಸಾಮುದ್ರಿಕಾ ಶಾಸ್ತ್ರದಲ್ಲೂ ತಮ್ಮ ಪ್ರಾವೀಣ್ಯತೆ ತೋರಿಸಿ ಮನೆಯವರನ್ನೆಲ್ಲಾ ಬೆರಗುಗೊಳಿಸಿದ್ದರು. ಬೈಠಕ್‌ನಲ್ಲಿ ಕಾರ್ಯಕರ್ತರೊಬ್ಬರು ಒಮ್ಮೆ ಪರಿಚಯವಾದರೆ ಸಾಕು, ಮೂರ್ನಾಲ್ಕು ತಿಂಗಳ ನಂತರ ಬಂದಾಗಲೂ ಅವರನ್ನು ಹೆಸರಿಡಿದೇ ಕೂಗಿ ಕರೆಯುವ ಅದ್ಭುತ ನೆನಪಿನ ಶಕ್ತಿ ಅವರದ್ದಾಗಿತ್ತು.



ಒಮ್ಮೆ ನಮ್ಮ ಮನೆಯಲ್ಲೇ ಉಳಿದುಕೊಂಡಾಗ, ಬೆಳಗಿನ ಜಾವ ಇಬ್ಬರೂ ಸೇರಿ ನಮ್ಮ ಸಂಸ್ಥೆಯ ಶಾಖೆಗೆ ಹೋಗಿ ಮರಳುವಾಗ ನನಗೆ ಕೇಳಿದ್ದರು, "ವಾಸು, ನಾನು ಮುಖ್ಯಮಂತ್ರಿಯಾದರೆ ನಿನಗೆ ಯಾವ ಖಾತೆ ಕೊಡಬೇಕು?" ಎಂದು. ಅದಕ್ಕೆ ನಾನು ನಗುತ್ತಾ, "ನನಗೆ ನಿಮ್ಮ ರಾಜಕೀಯ ಬೇಡ, ನನ್ನ ಪಾಡಿಗೆ ನನ್ನನ್ನು ವ್ಯಾಪಾರ ಮಾಡಲು ಬಿಡಿ . ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಮ್ ಟ್ಯಾಕ್ಸ್ ಇಲಾಖೆಯವರು ನನ್ನ ಹತ್ತಿರ ಬರದಂತೆ ನೋಡಿಕೊಂಡರೆ ಸಾಕು" ಎಂದು ಹೇಳಿದ್ದೆ. ಮತ್ತೊಮ್ಮೆ ಅವರು ದಾಂಡೇಲಿಗೆ ಬಂದಿದ್ದಾಗ ಅವರ ಸೂಟ್‌ಕೇಸ್‌ನ ಹ್ಯಾಂಡಲ್ ಕಟ್ ಆಯಿತು. ಹೊಸ ಸೂಟ್‌ಕೇಸ್ ಖರೀದಿಸಲು ಒಂದು ಸಣ್ಣ ಅಂಗಡಿಗೆ ಹೋದಾಗ ನಾನು ಬೆಲೆಯ ಬಗ್ಗೆ ಚೌಕಾಶಿ ಮಾಡಲು ಶುರು ಮಾಡಿದೆ. ಕೂಡಲೇ ಅವರು ನನ್ನನ್ನು ತಡೆದು, ಅಂಗಡಿಯವನು ಕೇಳಿದಷ್ಟು ಹಣವನ್ನು ಕೊಟ್ಟು ನನ್ನನ್ನು ಅಲ್ಲಿಂದ ಕರೆದುಕೊಂಡು ಬಂದರು. ದಾರಿಯಲ್ಲಿ ಬರುವಾಗ ಅವರು ಹೇಳಿದ ಮಾತು ಇಂದಿಗೂ ನನ್ನ ಮನಸಿನಲ್ಲಿ ಅಚ್ಚೊತ್ತಿದೆ: "ಯಾವಾಗ ನಾವು ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಒಂದು ರೂಪಾಯಿಗೂ ಚೌಕಾಶಿ ಮಾಡುವುದಿಲ್ಲವೋ, ಹಾಗಿರಬೇಕಾದರೆ ಇಂತಹ ಸಣ್ಣ ಅಂಗಡಿಯವರಲ್ಲಿ ಚೌಕಾಶಿ ಮಾಡುವುದು ಎಷ್ಟು ಸರಿ ವಾಸು?" ಬದುಕಿನ ಇಂತಹ ಉದಾತ್ತ ಚಿಂತನೆಗಳೇ ಅವರನ್ನು ಎತ್ತರಕ್ಕೆ ಏರಿಸಿರಬೇಕು.

ಮುಂದೆ ಅವರು ಪೂರ್ಣ ಪ್ರಮಾಣದಲ್ಲಿ ರಾಜಕೀಯಕ್ಕೆ ಪ್ರವೇಶ ಪಡೆದರು. ಭಾರತೀಯ ಜನತಾ ಪಕ್ಷದ ಪ್ರಚಾರ ಕಾರ್ಯಕ್ಕಾಗಿ ಆಗಿನ ಮಂಗಳೂರಿನ ಎಂ.ಪಿ. ಶ್ರೀ ಧನಂಜಯ ಕುಮಾರ್ ಅವರ ಜೊತೆಯಲ್ಲಿ ದಾಂಡೇಲಿಗೆ ಬಂದಾಗ, ಉಳಿದವರೆಲ್ಲ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ತಂಗಿದರೆ, ಅವರು ಮಾತ್ರ ನಮ್ಮ ಮನೆಯಲ್ಲೇ ರಾತ್ರಿ ತಂಗಿದ್ದರು. ಅಂದು ರಾತ್ರಿ ಮಲಗಿದ್ದಾಗ, "ಹೇಗೆ ನಡೆದಿದೆ ನಿನ್ನ ವ್ಯವಹಾರ?" ಎಂದು ಅತ್ಯಂತ ಆತ್ಮೀಯವಾಗಿ ವಿಚಾರಿಸಿದರು. ನಾನು ವಿವರಿಸುತ್ತಾ ಹೋದೆ, ಆದರೆ ಕೇವಲ ಎರಡೇ ನಿಮಿಷಗಳಲ್ಲಿ ಅವರ ಕಡೆಯಿಂದ ಗೊರಕೆಯ ಶಬ್ದ ಕೇಳಿಸಿತು! ಹಾಸಿಗೆಗೆ ಮೈ ಒರಗಿಸಿದ ತಕ್ಷಣವೇ ಅವರು ಗಾಢ ನಿದ್ರೆಗೆ ಜಾರುತ್ತಿದ್ದರು. ಮತ್ತೆ ಬೆಳಗಿನ ಜಾವ ಸುಪ್ರಭಾತದ ಸಮಯಕ್ಕೇ ಎದ್ದು, ಸ್ನಾನ ಮುಗಿಸಿ, ಭಕ್ತಿಯಿಂದ "ಶ್ರೀಮದ್ಭಗವದ್ಗೀತೆ"ಯನ್ನು ಪಠಣ ಮಾಡಿದ ನಂತರವೇ ಉಪಹಾರಕ್ಕೆ ಬರುತ್ತಿದ್ದರು. ಈ ರೀತಿ ಶ್ರೀಯುತ ಅನಂತ ಕುಮಾರ್ ಅವರು ನನ್ನ ಬದುಕಿನಲ್ಲಿ ಸ್ವಂತ ಅಣ್ಣನಂತೆ ಬೆನ್ನೆಲುಬಾಗಿ ನಿಂತು ನನಗೆ ಹೊರಜಗತ್ತನ್ನು ಪರಿಚಯಿಸಿದರು. ನಾನು ಬಾಲ್ಯದಿಂದಲೂ ಸಂಘದ ಸ್ವಯಂಸೇವಕನಾಗಿದ್ದರೂ ಕೂಡ, ನನ್ನಲ್ಲಿದ್ದ ಅಂಜುಬುರುಕತನ ಸಂಪೂರ್ಣವಾಗಿ ಮಾಯವಾಗಿರಲಿಲ್ಲ. ಆದರೆ, ಅನಂತ ಕುಮಾರ್ ಅವರು ನನಗೆ ಪ್ರಾಂತ ಕಾರ್ಯಕಾರಿಣಿ ಸದಸ್ಯ ಹಾಗೂ ಜಿಲ್ಲಾ ಪ್ರಮುಖನ ಜವಾಬ್ದಾರಿಯನ್ನು ನೀಡುವ ಮೂಲಕ ವಿವಿಧ ವಿಷಯಗಳ ಪರಿಚಯ ಮಾಡಿಕೊಟ್ಟರು ಮತ್ತು ಪುಸ್ತಕ ಓದುವ ಪ್ರವೃತ್ತಿ ಬೆಳೆಸಿದರು. ಪ್ರಾಂತ ಕಾರ್ಯಕಾರಿಣಿ ಸಭೆಗಳಲ್ಲಿ ನಾನೇನಾದರೂ ಅವರಿಗೆ ವೈಯಕ್ತಿಕವಾಗಿ ಪ್ರಶ್ನೆ ಕೇಳಿದರೆ, "ಇದೇ ಪ್ರಶ್ನೆಯನ್ನು ನೀನು ನೇರವಾಗಿ ಬೈಠಕ್‌ನಲ್ಲೇ ಕೇಳು" ಎಂದು ಹುರಿದುಂಬಿಸುತ್ತಿದ್ದರು. ಅಲ್ಲಿ ದೊಡ್ಡ ದೊಡ್ಡ ರಾಷ್ಟ್ರೀಯ ಮುಖಂಡರು ಇರುತ್ತಿದ್ದರಿಂದ ಅವರ ಎದುರು ಕೇಳುವುದಕ್ಕೆ ಧೈರ್ಯ ಸಾಲುತ್ತಿರಲಿಲ್ಲ. ನನ್ನೊಳಗಿನ ಆ ಅಳುಕನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಅವರು, ನನ್ನಲ್ಲಿದ್ದ ಅಂಜಿಕೆಯನ್ನು ಹೋಗಲಾಡಿಸಲು ಸದಾ ಪ್ರೇರೇಪಿಸುತ್ತಿದ್ದರು. ಈ ಮೂಲಕ ನನ್ನ ಜೀವನದಲ್ಲಿ ಸಾರ್ವಜನಿಕವಾಗಿ ಮಾತನಾಡುವ ಮತ್ತು ಪ್ರಶ್ನಿಸುವ ಧೈರ್ಯವನ್ನು ತುಂಬಿದವರೇ ಶ್ರೀ ಅನಂತ ಕುಮಾರ್. ಅವರ ಆತ್ಮಕ್ಕೆ ಅನಂತಾನಂತ ವಂದನೆಗಳು

**-ಪ್ರಭು ವಾಸುದೇವ**

ಪುಟ 1

# ಅನಂತ ನಾಯಕತ್ವ : ಸಾರ್ವಜನಿಕ ಬದುಕಿಗೆ ಆದರ್ಶ ಗುಣಗಳು

ಪ್ರತಿಯೊಂದು ಕಾಲೇಜಿನಿಂದ ಕನಿಷ್ಠ ನೂರು ಜನರನ್ನಾದರೂ ಪರಿಷತ್ತಿನ ಸದಸ್ಯರನ್ನಾಗಿ ಮಾಡಬೇಕು ಎಂಬ ಗುರಿ ನಿಗದಿಯಾಗಿತ್ತು ಮತ್ತು ಸದಸ್ಯತ್ವ ಶುಲ್ಕ ಕೇವಲ ಒಂದು ರೂಪಾಯಿಯಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಯೂ ವಿದ್ಯಾರ್ಥಿ ಪರಿಷತ್ತಿನ ಬಗ್ಗೆ ತಿಳುವಳಿಕೆ ಹೊಂದಿರುವುದು ಮುಖ್ಯವಾಗಿತ್ತು. ಇದಕ್ಕಾಗಿ ಅವರು ಅಭ್ಯಾಸ ವರ್ಗಗಳಲ್ಲಿ 'ಟೀಮ್' (TEAM) ಎಂಬ ಅದ್ಭುತ ಪರಿಕಲ್ಪನೆಯನ್ನು ಆರಂಭಿಸಿದರು. ಪ್ರತಿಯೊಂದು ಊರಿನಲ್ಲೂ ಒಂದು ಟೀಮ್ ಇರುತ್ತಿತ್ತು; ಪ್ರಮುಖ ಕಾರ್ಯಕರ್ತರು ಒಟ್ಟಿಗೆ ಕುಳಿತು ಚರ್ಚಿಸುವ, ವಾರಕ್ಕೊಮ್ಮೆ ಕಡ್ಡಾಯವಾಗಿ ಅಧ್ಯಯನ ವೃತ್ತ (Study Circle) ನಡೆಸುವ ವ್ಯವಸ್ಥೆಯನ್ನು ರೂಪಿಸಿದರು. ಪರೀಕ್ಷೆ ನಡೆಯುತ್ತಿದ್ದ ಮೂರು-ನಾಲ್ಕು ದಿನಗಳ ಬಿಡುವನ್ನು ಬಿಟ್ಟರೆ, ರಜಾದಿನಗಳನ್ನೂ ಸೇರಿಸಿಕೊಂಡು ಬಿಡುವಿಲ್ಲದಂತೆ ನಿರಂತರ ಪ್ರವಾಸ ಕೈಗೊಳ್ಳುತ್ತಿದ್ದರು. ಕೃಷ್ಣಭಟ್ಟರು, ವಿಷ್ಣುಕಾಂತ್, ದತ್ತಾತ್ರೇಯ ಹೊಸಬಾಳೆಯಂತಹ ಹಿರಿಯ ನಾಯಕರು ಭಾಗವಹಿಸಿ ಅಭ್ಯಾಸವರ್ಗಗಳನ್ನು ನಡೆಸುತ್ತಿದ್ದರು. ಒಂದು ಕಾರ್ಯಾಲಯವನ್ನು ನಡೆಸುವ ಬಗೆ, ಕಾರ್ಯಕ್ರಮಗಳನ್ನು ನಡೆಸುವ ರೀತಿ ಮೊದಲಾದ ವಿಷಯಗಳನ್ನು ಕಲಿಸಿಕೊಟ್ಟು ಸಾಮಾನ್ಯ ಕಾರ್ಯಕರ್ತರನ್ನು ನಾವೇ ಭಾಷಣ ಮಾಡುವಷ್ಟು ಪರಿಣತರನ್ನಾಗಿ ಹಾಗೂ ನಾಯಕರನ್ನಾಗಿ ಬೆಳೆಸಿದರು.

**ನಾಯಕತ್ವಕ್ಕೆ ಅಹಂ ಸಲ್ಲದು:** ಮೊದಲು ನಮಸ್ಕರಿಸುವ ಸದ್ಗುಣ ಅನಂತಕುಮಾರ್ ಅವರ ಮಾರ್ಗದರ್ಶನದಲ್ಲಿ ಬೆಳೆದ ಮತ್ತೊಬ್ಬ ಪ್ರಮುಖ ನಾಯಕ ಆರ್. ಅಶೋಕ್. ಅನಂತಕುಮಾರ್ ಅವರೊಂದಿಗಿನ ಪ್ರವಾಸದ ಸಮಯದಲ್ಲಿ ಅಶೋಕ್ ಅವರು ಒಂದು ವಿಶಿಷ್ಟ ವರ್ತನೆಯನ್ನು ಸದಾ ಗಮನಿಸುತ್ತಿದ್ದರು. ತಮ್ಮೆದುರು ಯಾರೇ ಬರಲಿ, ಅವರು ಬಡವರೋ ಅಥವಾ ಬಲ್ಲಿತರೋ ಎಂಬ ಭೇದವಿಲ್ಲದೆ ಅನಂತಕುಮಾರ್ ಅವರು ಎಲ್ಲರಿಗೂ ಮೊದಲು ತಾವಾಗಿಯೇ ನಮಸ್ಕರಿಸುತ್ತಿದ್ದರು. ಆರಂಭದಲ್ಲಿ ಈ ವರ್ತನೆ ಅಶೋಕ್ ಅವರಿಗೆ ಸರಿತೋರುತ್ತಿರಲಿಲ್ಲ. ನಾಯಕ ಅಥವಾ ಜನಪ್ರತಿನಿಧಿ ಎಂದಮೇಲೆ ಸಾಮಾನ್ಯರು ಬಂದು ಗೌರವ ಸಲ್ಲಿಸುವುದು ವಾಡಿಕೆ, ನಾಯಕನೇ ಮುಂದಾಗಿ ನಮಸ್ಕರಿಸಿದರೆ ಜನರ ದೃಷ್ಟಿಯಲ್ಲಿ ತಮ್ಮ ಬೆಲೆ ಕಡಿಮೆಯಾಗುವುದಿಲ್ಲವೇ ಎಂಬುದು ಅವರ ಅನಿಸಿಕೆಯಾಗಿತ್ತು. ಇದನ್ನು ಅವರು ನೇರವಾಗಿ ಅನಂತಕುಮಾರ್ ಅವರ ಬಳಿ ಹೇಳಿದಾಗ, ಅನಂತಕುಮಾರ್ ಅದನ್ನು ಒಪ್ಪಲಿಲ್ಲ.

ಅನಂತಕುಮಾರ್ ಅವರ ಪ್ರಕಾರ, ನಾಯಕತ್ವದ ಪ್ರತಿಷ್ಠೆ ಮತ್ತು ಬಿಗುಮಾನಗಳು ನಾಯಕನನ್ನು ಜನರಿಂದ ದೂರವಿಡುತ್ತವೆ; ಮುಖಂಡನೆನಿಸಿಕೊಂಡವನು ಅವರ ಗೌರವವನ್ನು ಸ್ವೀಕರಿಸುವಷ್ಟು ವ್ಯವಧಾನ ತೋರದಿರುವುದೇ ಹೆಚ್ಚು. ಸಾಮಾನ್ಯ ಜನರಿಗೂ ನಾಯಕನು ನಮ್ಮನ್ನು ಗಮನಿಸುತ್ತಾನೋ ಇಲ್ಲವೋ ಎಂಬ ಅಳುಕು ಇರುತ್ತದೆ. ಅದಕ್ಕೆ ಬದಲಾಗಿ ನಾಯಕನೇ ಮೊದಲು ನಮಸ್ಕರಿಸುವುದರಿಂದ ಜನರಲ್ಲಿ ಆತ್ಮೀಯತೆ ಬೆಳೆದು ಸಹಕಾರಿಯಾಗುತ್ತದೆ. ಜನಸಾಮಾನ್ಯರೊಂದಿಗೆ ನಿಕಟ ಹಾಗೂ ನಿರಂತರ ಸಂಪರ್ಕ ಹೊಂದಿರಬೇಕಾದರೆ ನಾಯಕನು ತನ್ನ ಅಹಂ ತೊರೆದು ಎಲ್ಲರೊಳಗೆ ಒಂದಾಗಬೇಕು. ಪ್ರಜೆಗಳು ಕಿರಿಯರಿರಲಿ ಅಥವಾ ಹಿರಿಯರಿರಲಿ, ಅವರಿಂದ ಗೌರವದ ನಿರೀಕ್ಷೆ ಮಾಡುವ ಬದಲಿಗೆ ಅವರ ಕಣ್ಣಲ್ಲಿ ಕಣ್ಣಿಟ್ಟು ತಾನೇ ಮೊದಲು ನಮಸ್ಕರಿಸುವುದು ನಾಯಕನಾದವನ ಜವಾಬ್ದಾರಿ ಎಂದು ಅವರು ನಂಬಿದ್ದರು. ಕೇವಲ ಚುನಾವಣೆಯ ಸಂದರ್ಭದಲ್ಲಷ್ಟೇ ಅಲ್ಲದೆ, ಯಾವುದೇ ಕಾಲದಲ್ಲೂ ಎದುರು ಬಂದ ಸರ್ವರಿಗೂ ತಾವಾಗಿಯೇ ಮೊದಲು ನಮಸ್ಕರಿಸುವುದು ಅನಂತಕುಮಾರ್ ಅವರಿಗೆ ರೂಢಿಯಾಗಿತ್ತು.





**ಸಂಘಟನೆಯ ಜೀವಾಳ:** ಕಾಳಜಿ, ಹಂಚಿಕೆ ಮತ್ತು ಮುನ್ನಡೆಸುವಿಕೆ (Care, Share, Run) ಅನಂತಕುಮಾರ್ ಅವರ ಯಶಸ್ವಿ ನಾಯಕತ್ವದ ಹಿಂದೆ ಮೂರು ಮುಖ್ಯ ಸೂತ್ರಗಳಿದ್ದವು, ಅದನ್ನು ಅವರು ಸದಾ "ಕೇರ್, ಶೇರ್ ಮತ್ತು ರನ್" (Care, Share and Run) ಎಂದು ಕರೆಯುತ್ತಿದ್ದರು. ಒಬ್ಬ ನಾಯಕನಾದವನು ಮೊದಲು ತನ್ನನ್ನು ನಂಬಿದ ಕಾರ್ಯಕರ್ತರ ಬಗ್ಗೆ ಅಪಾರವಾದ ಕಾಳಜಿಯನ್ನು (Care) ಹೊಂದಿರಬೇಕು. ನಂತರ ತನಗಿರುವ ಜವಾಬ್ದಾರಿ ಮತ್ತು ಅಧಿಕಾರಗಳನ್ನು ಇತರ ಅರ್ಹ ಕಾರ್ಯಕರ್ತರಿಗೆ ಸಮಾನವಾಗಿ ಹಂಚಬೇಕು (Share). ಈ ಎರಡು ಹಂತಗಳು ಯಶಸ್ವಿಯಾದಾಗ ಮಾತ್ರ ಯಾವುದೇ ಒಂದು ಸಂಸ್ಥೆ ಅಥವಾ ಸಂಘಟನೆ ಸುಸೂತ್ರವಾಗಿ ಮುನ್ನಡೆಯಲು (Run) ಸಾಧ್ಯವಾಗುತ್ತದೆ ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಈ ಅಪರೂಪದ ತತ್ವದ ಆಧಾರದ ಮೇಲೆಯೇ ಅವರು ತಳಮಟ್ಟದಿಂದ ಕಾರ್ಯಕರ್ತರ ದೊಡ್ಡ ಪಡೆ ಹಾಗೂ ನಾಯಕರ ಸಮೂಹವನ್ನೇ ಸೃಷ್ಟಿಸಿದರು. ಕಾರ್ಯಕರ್ತರ ಮೇಲಿದ್ದ ಅವರ ಕಾಳಜಿಗೆ ಮತ್ತೊಂದು ಅದ್ಭುತ ಉದಾಹರಣೆಯೆಂದರೆ, ಚುನಾವಣೆಯ ಒತ್ತಡದ ಸಮಯದಲ್ಲೂ ಅವರು ತೋರುತ್ತಿದ್ದ ಮಾನವೀಯತೆ. ಮತದಾನದ ದಿನದಂದು ಸಂಜೆಯಾಗುತ್ತಿದ್ದಂತೆ ಇಡೀ ದಿನ ವಿಶ್ರಮಿಸದೆ ದುಡಿದ ಕಾರ್ಯಕರ್ತರ ಬಳಿಗೆ ಸ್ವತಃ ತಾವೇ ಹೋಗಿ, "ಎಲ್ಲರೂ ಊಟ ಮಾಡಿದಿರಾ? ಎಲ್ಲರಿಗೂ ಊಟದ ವ್ಯವಸ್ಥೆ ಸರಿಯಾಗಿ ತಲುಪಿದೆಯೇ?" ಎಂದು ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ವಿಚಾರಿಸುತ್ತಿದ್ದರು. ಇಡೀ ದಿನ ಚುನಾವಣೆಯ ರಾಜಕೀಯ ಲೆಕ್ಕಾಚಾರದಲ್ಲಿ ಮುಳುಗಿದ್ದರೂ, ಕೊನೆಯ ಕ್ಷಣದಲ್ಲಿ ಅವರ ಆದ್ಯತೆ ಕೇವಲ ತನ್ನ ಕಾರ್ಯಕರ್ತರ ಹಿತರಕ್ಷಣೆಯಷ್ಟೇ ಆಗಿರುತ್ತಿತ್ತು. ನಾಯಕನ ಇಂತಹ ಆತ್ಮೀಯ ಮತ್ತು ಸೌಜನ್ಯದ ನಡವಳಿಕೆಯೇ ಕಾರ್ಯಕರ್ತರಲ್ಲಿ ನಿಷ್ಠೆ ಮತ್ತು ಅಪಾರವಾದ ಅಭಿಮಾನವನ್ನು ಹುಟ್ಟುಹಾಕುತ್ತಿತ್ತು.

**ಜವಾಬ್ದಾರಿಯ ವಿಕೇಂದ್ರೀಕರಣ ಮತ್ತು ಮುಖಂಡರ ಸೃಷ್ಟಿ** ನಾಯಕತ್ವದ ಜವಾಬ್ದಾರಿಗಳನ್ನು ಹಂಚುವ ವಿಚಾರದಲ್ಲಿ ಅನಂತಕುಮಾರ್ ಅವರು ಅತ್ಯಂತ ಚತುರರಾಗಿದ್ದರು. ಯಾವುದೇ ಒಂದು ದೊಡ್ಡ ಕಾರ್ಯಕ್ರಮ ಅಥವಾ ಸಭೆ ಎದುರಾದಾಗ, ಎಲ್ಲಾ ಜವಾಬ್ದಾರಿಗಳನ್ನು ತಾವೊಬ್ಬರೇ ಹೊತ್ತುಕೊಳ್ಳುತ್ತಿರಲಿಲ್ಲ. ಬದಲಿಗೆ, ತಮ್ಮ ಸುತ್ತಲಿದ್ದ ಪ್ರಮುಖ ಮುಖಂಡರಿಗೆ ಪ್ರತ್ಯೇಕ ಜವಾಬ್ದಾರಿಗಳನ್ನು ವಹಿಸಿಕೊಡುತ್ತಿದ್ದರು. ಉದಾಹರಣೆಗೆ, ಕಾರ್ಯಕ್ರಮದ ಯಶಸ್ಸಿನ ಹೊಣೆಯನ್ನು ಒಬ್ಬರಿಗೆ ನೀಡಿದರೆ, ಮ್ಯಾನೇಜ್‌ಮೆಂಟ್ ಅಥವಾ ಆಡಳಿತದ ಉಸ್ತುವಾರಿಯನ್ನು ಮಗದೊಬ್ಬರಿಗೆ ವಹಿಸುತ್ತಿದ್ದರು. ಆಯಾ ವಿಭಾಗದ ನಾಯಕರು ತಮ್ಮ ಜವಾಬ್ದಾರಿಯನ್ನು ಸ್ವತಂತ್ರವಾಗಿ ನಿಭಾಯಿಸುವಂತೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತಿದ್ದರು. ಇಂತಹ ವ್ಯವಸ್ಥಿತವಾದ ಜವಾಬ್ದಾರಿಯ ವಿಕೇಂದ್ರೀಕರಣದಿಂದಾಗಿ ಪ್ರತಿ ಹಂತದಲ್ಲೂ ಹೊಸ ಹೊಸ ಮುಖಂಡರು ಸೃಷ್ಟಿಯಾಗಲು ಸಾಧ್ಯವಾಯಿತು. ಅವರು ಎಂದಿಗೂ ಒಂಟಿ ನಾಯಕನಾಗಿ ಬೆಳೆಯಲು ಬಯಸಲಿಲ್ಲ; ತನ್ನೊಂದಿಗೆ ಇಡೀ ತಂಡವನ್ನೇ ಮುನ್ನಡೆಸುತ್ತಾ ನಾಯಕರ ದೊಡ್ಡ ಸರಣಿಯನ್ನೇ ಬೆಳೆಸಿದರು.

ಇಂದು ಸಾರ್ವಜನಿಕ ಜೀವನದಲ್ಲಿ ನಾಯಕತ್ವದ ಬಗ್ಗೆ ಚರ್ಚೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಅನಂತಕುಮಾರ್ ಅವರ ಬದುಕು ಮತ್ತು ಕಾರ್ಯಶೈಲಿ ಅತ್ಯಂತ ಪ್ರಸ್ತುತವಾಗಿವೆ. ಶಿಸ್ತು, ಸಂಘಟನೆ, ಜನಸಂಪರ್ಕ, ಸೇವಾಭಾವ ಮತ್ತು ರಾಷ್ಟ್ರದ ಬಗ್ಗೆ ಬದ್ಧತೆ ಹೊಂದಿದ ನಾಯಕತ್ವವೇ ಸಮಾಜವನ್ನು ಪರಿವರ್ತಿಸಬಲ್ಲದು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ತಮ್ಮೊಂದಿಗೆ ನೂರಾರು ಕಾರ್ಯಕರ್ತರನ್ನು ನಾಯಕರನ್ನಾಗಿ ಬೆಳೆಸಿದ ಅವರ ಪರಂಪರೆ ಇಂದಿಗೂ ಯುವಜನತೆಗೆ ಸ್ಫೂರ್ತಿಯ ಮೂಲವಾಗಿದೆ. ಅನಂತಕುಮಾರ್ ಅವರ ನಾಯಕತ್ವದ ಗುಣಗಳು ಕೇವಲ ಇತಿಹಾಸದ ಭಾಗವಲ್ಲ; ಭವಿಷ್ಯದ ಭಾರತವನ್ನು ಕಟ್ಟುವ ಯುವಜನತೆಗೆ ದಾರಿದೀಪವಾಗಿವೆ.

# ಅದಮ್ಯ ಚೇತನ
# ADAMYA CHETANA



ಶ್ರೀಮತಿ ಗಿರಿಜಾ ಶಾಸ್ತ್ರಿ ಸ್ಮಾರಕ ಸಂಸ್ಥೆ (ರಿ)
ಸಂಸ್ಥಾಪಕರು : ಶ್ರೀ ಅನಂತಕುಮಾರ್
ಅಧ್ಯಕ್ಷರು : ಡಾ. ತೇಜಸ್ವಿನಿ ಅನಂತಕುಮಾರ್

Smt. Girija Shastry Memorial Trust (R)
**Founder : Sri AnanthKumar**
Chairperson : Dr. Tejaswini Ananthkumar

ಪರಿಸರ ರಕ್ಷಣೆಗೆ ಪೂರಕವಾಗಿ ಹಸಿರು ಜೀವನಶೈಲಿಯನ್ನು ಅಳವಡಿಸಿಕೊಳ್ಳಲು 'ಸಸ್ಯಾಗ್ರಹ' ಎಂಬ ಆಂದೋಲನವನ್ನು 2015 ರಲ್ಲೇ ಪ್ರಾರಂಭಿಸಿದವರು ಮಾನ್ಯ ಶ್ರೀ ಅನಂತಕುಮಾರ್. ಸಸ್ಯಾಗ್ರಹ ಆಂದೋಲನದ ಅಡಿಯಲ್ಲಿ ಅದಮ್ಯ ಚೇತನ ಸಂಸ್ಥೆ ಎಲ್ ಪಿ ಜಿ ರಹಿತ, ಜೈವಿಕ ಇಂಧನ, ಶೂನ್ಯ ತ್ಯಾಜ್ಯ ಅಡುಗೆಮನೆಯ ಮುಖಾಂತರ ಪ್ರತಿದಿನ 1.65 ಲಕ್ಷ ಮಕ್ಕಳಿಗೆ ಊಟ ನೀಡುವುದರ ಜೊತೆಗೆ ಪ್ರತಿ ಭಾನುವಾರದಂದು ಗಿಡ ನೆಡುವ-ಪೋಷಿಸುವ ಅಭಿಯಾನವನ್ನು 'ಹಸಿರು ಭಾನುವಾರ' ಹೆಸರಿನಲ್ಲಿ ಜನವರಿ 2016ರಿಂದ ನಿರಂತರವಾಗಿ ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿದೆ. ನಗರ ಪ್ರದೇಶದ ಹಸಿರು ಹೊದಿಕೆಯನ್ನು ಮತ್ತು ಸಮಾಜದಲ್ಲಿ ಪರಿಸರ ಜ್ಞಾನವನ್ನು ಹೆಚ್ಚಿಸಲು ಈ ಅಭಿಯಾನ ವೇದಿಕೆಯಾಗಿರುವುದು ಸರ್ವವಿದಿತ.

## ಬೃಹತ್ ವೃಕ್ಷಾರೋಪಣ ಅಭಿಯಾನ

ಒಂದೇ ದಿನದಲ್ಲಿ **25,000** ಸಸಿಗಳನ್ನು ನೆಡುವ ಮಹಾ ಅಭಿಯಾನ

ದಿನಾಂಕ : **27 ಜೂನ್ 2026,** ಶನಿವಾರ | ಸ್ಥಳ : ಬನಶಂಕರಿ 6ನೇ ಹಂತ, ಬೆಂಗಳೂರು

ಇದೇ ಜೂನ್ 27ರಂದು, ಒಂದೇ ದಿನದಲ್ಲಿ 25,000 ಸಸಿಗಳನ್ನು ನೆಡುವ ಮಹತ್ತರ ಸೇವಾ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಕೈಗೊಳ್ಳುತ್ತಿದೆ. ಜೊತೆಗೆ, ನೆಟ್ಟ ಪ್ರತಿಯೊಂದು ಸಸಿಯನ್ನು ಮುಂದಿನ ಮೂರು ವರ್ಷಗಳ ಕಾಲ ಪೋಷಿಸಿ, ಸಂರಕ್ಷಿಸುವ ಜವಾಬ್ದಾರಿಯನ್ನು ಸಹ ಹೊತ್ತಿದೆ. ಬನಶಂಕರಿಯ ತುರಹಳ್ಳಿಯ ಪಕ್ಕದಲ್ಲಿರುವ ಈ ಜಾಗವನ್ನು ನಂತರ ವಸತಿ ಲೇಔಟ್ ಮಾಡದೇ, ಅರಣ್ಯವಾಗಿಯೇ ರಕ್ಷಿಸಲಾಗುವದು ಅನ್ನುವ ಒಪ್ಪಿಗೆಯ ಒಡಂಬಡಿಕೆಯನ್ನು BDA ಜೊತೆ ಮಾಡಿಕೊಳ್ಳಲಾಗಿದೆ .

ಈ ಅಭಿಯಾನದಲ್ಲಿ ಒಂದು ದಿನ ಪೂರ್ಣವಾಗಿ ಭಾಗವಹಿಸುವ ಹಾಗೂ ಮುಂದಿನ ಮೂರು ವರ್ಷಗಳ ಕಾಲ ನೀರುಣಿಸುವುದು, ಕಳೆ ತೆಗೆಯುವುದು, ಮಲ್ಚಿಂಗ್ ಮಾಡುವುದು, ಗೊಬ್ಬರ ಹಾಕುವುದು ಸೇರಿದಂತೆ ಸಸಿಗಳ ಆರೈಕೆ ಮಾಡುವ ಈ ಪಯಣದಲ್ಲಿ ನಮ್ಮೊಂದಿಗೆ ಕೈಜೋಡಿಸಲು ನಿಮ್ಮನ್ನು ಆತ್ಮೀಯವಾಗಿ ಆಹ್ವಾನಿಸುತ್ತೇವೆ. ಒಂದು ಸಸಿ ನೆಟ್ಟು ಪೋಷಿಸುವ ಖರ್ಚು 380 ರೂಪಾಯಿ. ಅಂದಾಜು ಒಂದು ಕೋಟಿ ರೂಪಾಯಿಯ ಆಯ-ವ್ಯಯ ಬಜೆಟ್ ಮಾಡಲಾಗಿದೆ. ತನು-ಮನ-ಧನದಿಂದ ಅದಮ್ಯ ಚೇತನವನ್ನು ಸಹಕರಿಸಲು ವಿನಂತಿಸಿಕೊಳ್ಳುತ್ತೇವೆ.

**ಬನ್ನಿ... ಸಸಿಗಳನ್ನು ನೆಡೋಣ.**
**ಮೂರು ವರ್ಷಗಳ ಕಾಲ ಅವುಗಳಿಗೆ ಗೊಬ್ಬರ ಕೊಟ್ಟು , ನೀರುಣಿಸಿ ಕಾಪಾಡೋಣ**
**ಅವು ಮುಂದಿನ ಹಲವು ತಲೆಮಾರುಗಳ ಕಾಲ ನಮ್ಮನ್ನು ಕಾಪಾಡುತ್ತವೆ.**

**ನೋಂದಾವಣೆ :**

ನೋಂದಾವಣೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

**ಪ್ರಾಯೋಜಕತ್ವ :**

ಜೂನ್ 27ಕ್ಕೆ 25,000 ಸಸಿ ನೆಟ್ಟು ಮೂರು ವರ್ಷ ಪೋಷಿಸುವ ಈ ಬೃಹತ್ ಸಂಕಲ್ಪಕ್ಕೆ ಧನ ಸಹಾಯ ಮಾಡಲು ಸ್ಕ್ಯಾನ್ ಮಾಡಿ,
ಮೊಬೈಲ್ ಸಂಖ್ಯೆ **9449867954** ಗೆ ಸ್ಕ್ರೀನ್ ಶಾಟ್ ಕಳುಹಿಸಿ. ರೂ 2000ಕ್ಕೂ ಹೆಚ್ಚು ಡೊನೇಷನ್ ಕೊಟ್ಟವರು ದಯಮಾಡಿ ತಮ್ಮ PAN / ಆಧಾರ ಸಂಖ್ಯೆ ಸಹ ಕಳುಹಿಸಿ

www.**adamyachetana**.org  **+91 89046 23967**

ಅನಂತಪಥ
Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )







ಬೆಂಗಳೂರಿನ ಜೆ.ಪಿ ನಗರದಲ್ಲಿ ಪರಿಸರ ಸಂರಕ್ಷಣೆ ಹಾಗೂ ಶೂನ್ಯ ತ್ಯಾಜ್ಯ ಜೀವನಶೈಲಿಯ ಕುರಿತು ಜಾಗೃತಿ ಮೂಡಿಸುವ ಜೀರೋ ವೇಸ್ಟ್ ಎಕ್ಸ್‌ಪೀರಿಯನ್ಸ್ ಸೆಂಟರ್‌ಗೆ ಡಾ. ತೇಜಸ್ವಿನಿ ಅನಂತಕುಮಾರ್ ಚಾಲನೆ ನೀಡಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಸಸ್ಯಾಗ್ರಹ ಅಭಿಯಾನದಡಿ ನವಲಗುಂದ ತಾಲೂಕಿನ ಶಿರೂರಿನ ಸರ್ಕಾರಿ ಶಾಲೆಗಳಲ್ಲಿ 40 ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲಾಯಿತು.

ದಿನಾಂಕ 21ರಂದು ಜೋಧಪುರದ ಅದಮ್ಯ ಚೇತನದ ಬಿಸಿಯೂಟ ಯೋಜನೆಯನ್ನು ನಿರ್ವಹಣೆ ಮಾಡುತ್ತಿರುವ ರಾಜೇಂದ್ರ ಸಿಂಗ್ ರಾಖಿ, ಜಬ್ಬರಸಿಂಗ್, ಎಸ್ ಪಿ ಜೈನ್ ಮತ್ತು ರಾಜೇಶ್ ಜೈನ್ ಬೆಂಗಳೂರಿನ ಅನಂತ್ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು.







ಅದಮ್ಯ ಚೇತನದ ವಿವಿಧ ಕೇಂದ್ರಗಳಲ್ಲಿ ನಿತ್ಯ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದ್ದು, ಪ್ರತಿದಿನ ನೂರಾರು ಮಂದಿಗೆ ನೆಮ್ಮದಿ ನೀಡುತ್ತಿರುವ ಅನ್ನದಾನ ಸೇವೆ.

ಜೂನ್ 5ರ ವಿಶ್ವ ಪರಿಸರ ದಿನದ ಅಂಗವಾಗಿ ಅದಮ್ಯ ಚೇತನ ಹಾಗೂ ಅನಂತಕುಮಾರ್ ಪ್ರತಿಷ್ಠಾನದ ವತಿಯಿಂದ ಸಸಿಗಳನ್ನು ವಿತರಿಸಲಾಯಿತು.





ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 543 ರಿಂದ 547ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.